# ಮನುವಿಕಾಸ

MANUVIKASA

EdelGive Foundation
An Edelweiss Initiative

ಮನುವಿಕಾಸ ಸಂಸ್ಥೆಯಿಂದ ಪ್ರಕಟಿತ ವಾರ್ತಾ ಪತ್ರ ಖಾಸಗಿ ಪ್ರಚಾರಕ್ಕಾಗಿ ಮಾತ್ರ

ಸಂಪಾದಕೀಯ ಮಂಡಳಿ – ಶುಭಾ ಪೈ, ಗಣಪತಿ ಹೆಗಡೆ, ಶ್ರೀಕಾಂತ ಹೆಗಡೆ

ಸಂಪಾದಕರು : ಗಣಪತಿ ಭಟ್ಟ

ಸಂಚಿಕೆ : 4   ಸಂಪುಟ : 9





## ಮನುವಿಕಾಸ ಸಂಸ್ಥೆಯ ಸಮಾಜಮುಖಿ ಕಾರ್ಯ ಸಮಾಜಕ್ಕೆ ಮಾದರಿ: ಶಾಸಕ ದಿನಕರ ಶೆಟ್ಟಿ

ಮನುವಿಕಾಸ ಸ್ವಯಂ ಸೇವಾ ಸಂಸ್ಥೆಯು ಈಡೇಲ್‌ಗೀವ್ ಫೌಂಡೇಶನ್ ಇವರ ಸಹಯೋಗದೊಂದಿಗೆ ದಿನಾಂಕ 25–6–2025 ಮಂಗಳವಾರದಂದು ಕುಮಟಾ ತಾಲೂಕಿನ ಗ್ರಾಮ ಒಕ್ಕಲಿಗ ಸಮುದಾಯ ಭವನದಲ್ಲಿ ಬೃಹತ್ ಮಹಿಳಾ ಸಮಾವೇಶವನ್ನು ಆಯೋಜಿಸಿತ್ತು.

ಕಾರ್ಯಕ್ರಮ ಉದ್ದೇಶಿಸಿ ಮನುವಿಕಾಸ ಸಂಸ್ಥೆಯ ನಿರ್ದೇಶಕರಾದ ಗಣಪತಿ ಭಟ್ಟ ಮಾತನಾಡಿ, ಸಂಸ್ಥೆಯು ಇಲ್ಲಿಯವರೆಗೆ 315 ಕೆರೆಗಳನ್ನ ರೈತರ ಸಹಭಾಗಿತ್ವದಲ್ಲಿ ಅಭಿವೃದ್ಧಿಪಡಿಸಿದೆ, 4000 ಕ್ಕೂ ಅಧಿಕ ಕೃಷಿ ಹೊಂಡಗಳನ್ನು ರೈತರಿಗೆ ನಿರ್ಮಾಣ ಮಾಡಿಕೊಟ್ಟಿದೆ, 3000 ಸ್ವ ಸಹಾಯ ಸಂಘಗಳನ್ನು ರಚಿಸುವ ಮೂಲಕ 30,000 ಕ್ಕೂ ಹೆಚ್ಚಿನ ಮಹಿಳೆಯರೊಂದಿಗೆ ಕಾರ್ಯನಿರ್ವಹಿಸುತ್ತಿದೆ ಎಂದರು. 8000 ಮಹಿಳೆಯರಿಗೆ ಕೌಶಲ್ಯ ತರಬೇತಿಗಳನ್ನು ನೀಡಿ ಅವರು ಸ್ವಾವಲಂಬಿಗಳಾಗಿ ಬದುಕಲು ನೆರವಾಗಿದ್ದೇವೆ. ಗ್ರಾಮೀಣ ಜನರ ನಿರುದ್ಯೋಗ ನಿವಾರಿಸಲು ನರೇಗಾ ಯೋಜನೆಯ ಮೂಲಕ ಉದ್ಯೋಗ ಅವಕಾಶ ಕಲ್ಪಿಸಲು ಜಾಗೃತಿ ಮೂಡಿಸಿದ್ದೇವೆ. ಸಮಾಜದ ಎಲ್ಲಾ ಸ್ಥರಗಳ ಅಭಿವೃದ್ಧಿ ಆದಾಗ ಮಾತ್ರ ಸಮಾಜದ ಅಭಿವೃದ್ಧಿ ಸಾಧ್ಯ ಎಂದು ಸಂಸ್ಥೆ ನಂಬಿದೆ. ಹಾಗಾಗಿ ಅದಕ್ಕೆ ಪೂರಕವಾಗಿ ಬೇಕಾದ ಕಾರ್ಯ ಚಟುವಟಿಕೆಗಳನ್ನು ರೂಪಿಸಿ ಅನುಷ್ಠಾನಗೊಳಿಸುತ್ತಿದ್ದೇವೆ ಎಂದರು.

ಕಾರ್ಯಕ್ರಮವನ್ನು ಕುಮಟಾ ವಿಧಾನಸಭಾ ಕ್ಷೇತ್ರದ ಶಾಸಕರಾದ ದಿನಕರ್ ಶೆಟ್ಟಿಯವರು ಉದ್ಘಾಟಿಸಿ ಮಾತನಾಡಿ, ಮನುವಿಕಾಸ ಸಂಸ್ಥೆಯು ಕಳೆದ 23 ವರ್ಷಗಳಿಂದ ಜಲ ಸಂರಕ್ಷಣೆಯ ಮೂಲಕ ಕೆರೆಗಳ ಅಭಿವೃದ್ಧಿ ಕಾರ್ಯದೊಂದಿಗೆ ರೈತರಿಗೆ ಬೆಂಬಲ ನೀಡುತ್ತಾ ಬಂದಿದೆ. ಹಾಗೆಯೇ ಮಹಿಳೆಯರು ಸ್ವಾವಲಂಬಿಗಳಾಗಲು ಮಹಿಳಾ ಸ್ವ ಸಹಾಯ ಸಂಘಗಳನ್ನು ರಚಿಸಿ ಅವರಲ್ಲಿ ಉಳಿತಾಯ ಮನೋಭಾವನೆಯನ್ನು ಮೂಡಿಸಿ ಅವರಿಗೆ ಸ್ವ ಉದ್ಯೋಗದ ತರಬೇತಿಗಳನ್ನು ನೀಡಿ ಸಾಮಾಜಿಕವಾಗಿ, ಆರ್ಥಿಕವಾಗಿ ಮುಂದೆ ಬರಲು ಸಹಾಯ ಮಾಡುತ್ತಾ ಬಂದಿದೆ. ಸರ್ಕಾರವು ಈಗಾಗಲೇ ಮಹಿಳೆಯರಿಗಾಗಿ ಹಲವಾರು ಯೋಜನೆಗಳನ್ನು ಜಾರಿಗೆ ತಂದಿದೆ. ಆದರೆ ಸರ್ಕಾರವೇ ಎಲ್ಲಾ ಕೆಲಸಗಳನ್ನು ಮಾಡಲು ಸಾಧ್ಯವಿಲ್ಲ. ಮನುವಿಕಾಸದಂತಹ ಸ್ವಯಂ ಸೇವಾ ಸಂಸ್ಥೆಗಳು ಸರ್ಕಾರದ ಯೋಜನೆಗಳನ್ನು ಜನರಿಗೆ ತಲುಪಿಸುವಲ್ಲಿ ಕಾರ್ಯನಿರ್ವಹಿಸುತಿವೆ. ಮಹಿಳೆಯರು ಕೇವಲ ತನ್ನ ಕುಟುಂಬಕ್ಕೆ ಮಾತ್ರ ಸೀಮಿತವಾಗದೆ ಎಲ್ಲಾ ರಂಗದಲ್ಲಿಯೂ ಮುಂಚೂಣಿಯಲ್ಲಿ ಬರುವಂತಹ ಕೆಲಸ ಮನುವಿಕಾಸ ಸಂಸ್ಥೆಯ ನಿರ್ದೇಶಕ ಗಣಪತಿ ಭಟ್ಟರವರು ಮಾಡುತ್ತಿರುವುದು ನಿಜಕ್ಕೂ ಹೆಮ್ಮೆಯ ವಿಷಯ ಎಂದರು.

ಕಾರ್ಯಕ್ರಮಕ್ಕೆ ಅತಿಥಿಗಳಾಗಿ ಆಗಮಿಸಿದ ಸಾಮಾಜಿಕ ಕಾರ್ಯಕರ್ತರಾದ ಸೂರಜ್ ನಾಯಕ್ ಸೋನಿ ಮಾತನಾಡಿ, ಈ ಕಾರ್ಯಕ್ರಮವನ್ನು ಸಂಘಟಿಸಿದ ಮನುವಿಕಾಸ ಸಂಸ್ಥೆಯು ಕೋವಿಡ್ ಮತ್ತು ನೆರೆ ಪ್ರವಾಹ ಉಂಟಾದಾಗ ಮಾಡಿರುವ ಕಾರ್ಯಗಳು ನಿಜವಾಗಿಯೂ ಸಹ ಮೌಲ್ಯಯುತವಾದದ್ದು, ಸಂಸ್ಥೆಯ ಜೊತೆ ನಮ್ಮ ಸಹಕಾರ ಸದಾ ಇರುತ್ತದೆ ಎಂದರು.

ಸಹಾಯಕ ಪೊಲೀಸ್ ಅಧಿಕಾರಿ ಸಾವಿತ್ರಿ ನಾಯಕ್ ಮಾತನಾಡಿ ಮಹಿಳೆಯರ ಸುರಕ್ಷತೆಗಾಗಿ ಇಲಾಖೆಯು ಹಲವಾರು ಕಾನೂನುಗಳನ್ನು ಜಾರಿಗೆ ತಂದಿದ್ದು ಅದರ ಜಾಗೃತಿಯನ್ನು ಸಹ ಮೂಡಿಸುತ್ತಿದೆ. ಬಾಲಕಾರ್ಮಿಕ ಪದ್ಧತಿಯ ನಿರ್ಮೂಲನೆ ಮತ್ತು ಮಹಿಳೆಯರ ಸುರಕ್ಷತೆ ನಮ್ಮ ಇಲಾಖೆಯ ಮುಖ್ಯ ಆದ್ಯತೆಯಾಗಿದೆ ಎಂದರು.

ಇದೇ ಸಂದರ್ಭದಲ್ಲಿ ಮನುವಿಕಾಸ ಸಂಸ್ಥೆಯಿಂದ ಕೌಶಲ್ಯ ತರಬೇತಿ ಪಡೆದು ಸ್ವ ಉದ್ಯೋಗದಿಂದ ಉದ್ಯಮಶೀಲರಾದ ಆಯ್ದ ಮಹಿಳೆಯರಿಗೆ, ಉತ್ತಮ ಸ್ವ ಸಹಾಯ ಸಂಘಗಳನ್ನು ನಿರ್ವಹಿಸುತ್ತಿರುವ ಸಂಘಗಳ ಮಹಿಳೆಯರಿಗೆ ಸನ್ಮಾನಿಸಿ ಗೌರವಿಸಲಾಯಿತು.

ಈ ಕಾರ್ಯಕ್ರಮದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಆರ್.ಎಲ್ ಭಟ್, ಕೆನರಾ ಬ್ಯಾಂಕ್ ಆರ್.ಸಿ.ಟಿ ನಿರ್ದೇಶಕರಾದ ರಾಜು ಕಲ್ಲಪ್ಪ, ಬ್ಯಾಂಕ್ ಆಫ್ ಬರೋಡದ ವ್ಯವಸ್ಥಾಪಕರಾದ ಆನಂದ್, ಕುಮಟಾ ಬಾಳಿಗಾ ಕಾಲೇಜಿನ ಪ್ರಾಚಾರ್ಯರಾದ ಪ್ರೀತಿ ಬಂಡಾರ್ಕರ್, ಕುಮಟಾ ರೋಟರಿ ಕ್ಲಬ್‌ನ ಸದಸ್ಯರಾದ ಜಯಶ್ರೀ ಕಾಮತ್ ಮುಂತಾದ ಗಣ್ಯ ವ್ಯಕ್ತಿಗಳು ಹಾಗೂ 500 ಕ್ಕೂ ಹೆಚ್ಚಿನ ವಿವಿಧ ಸ್ವ ಸಹಾಯ ಸಂಘದ ಮಹಿಳೆಯರು ಮನುವಿಕಾಸ ಸಂಸ್ಥೆಯ ಸಿಬ್ಬಂದಿಗಳು ಉಪಸ್ಥಿತರಿದ್ದರು.



# ಸಂಪಾದಕೀಯ

### ಆತ್ಮೀಯ ಎಲ್ಲಾ ಓದುಗರಿಗೆ ನನ್ನ ನಮಸ್ಕಾರಗಳು

ಶಿಕ್ಷಣ ಪ್ರತಿಯೊಬ್ಬರಿಗೂ ಕೂಡ ಅತಿ ಅವಶ್ಯಕವಾಗಿ ಬೇಕಾಗಿರುವಂತದ್ದು. ಕೆಲವೊಂದು ಮನೆಗಳಲ್ಲಿ ಪಾಲಕರು ತಮ್ಮ ಮಕ್ಕಳಿಗೆ ಹೆಚ್ಚಿನ ಪ್ರೋತ್ಸಾಹವನ್ನು ನೀಡದೆ ಕೆಲವು ಪ್ರತಿಭಾವಂತ ಮಕ್ಕಳು ಕಲಿಕೆಯಿಂದ ದೂರಾಗಿ ಆಡುವ ವಯಸ್ಸಿನಲ್ಲಿ ಕೆಲಸದ ಹಾದಿಯನ್ನು ಹಿಡಿದಿದ್ದನ್ನು ನಾನು ಬಹಳ ಹತ್ತಿರದಿಂದ ಕಂಡಿದ್ದೇನೆ. ನಮ್ಮ ಕೈಯಲ್ಲಿನ ಐದು ಬೆರಳುಗಳು ಒಂದೇ ಸಮನಾಗಿ ಇರುವುದಿಲ್ಲ, ಒಂದೊಂದು ಬೆರಳುಗಳ ವಿನ್ಯಾಸವು ವಿಭಿನ್ನವಾಗಿದೆ, ಅದೇ ರೀತಿಯಲ್ಲಿ ವಿದ್ಯಾರ್ಥಿಗಳೂ ಕೂಡ ಒಬ್ಬರು ಅತಿ ಹೆಚ್ಚಿನ ಅಂಕಗಳನ್ನು ಪಡೆದು ತರಗತಿಗೆ ಮೊದಲಾಗಬಹುದು, ಕೆಲವರು ತಕ್ಕಮಟ್ಟಿನ ಅಂಕಗಳನ್ನು ಪಡೆದು ಫಲಿತಾಂಶ ಪಟ್ಟಿಯ ಸಾಲಿನಲ್ಲಿ ಕೊನೆಯಿಂದ ಮೊದಲಿಗರು ಆಗಬಹುದು. ಅಂತವರನ್ನು ನಾವು ಶೈಕ್ಷಣಿಕ ವ್ಯವಸ್ಥೆಯಲ್ಲಿ ಮುಂದಕ್ಕೆ ತರುವಂತಹ ಉದ್ದೇಶದಿಂದ ಶಿರಸಿ ತಾಲೂಕಿನ ಬನವಾಸಿ ಭಾಗದ ಆಯ್ದ 10 ಶಾಲೆಗಳ ವ್ಯಾಪ್ತಿಯಲ್ಲಿ ಮಕ್ಕಳಿಗೆ ಉಚಿತವಾಗಿ ಶಾಲಾ ಕಲಿಕೆಯ ನಂತರದಲ್ಲಿ ವಿಶೇಷ ತರಗತಿಗಳನ್ನು ನುರಿತ ಶಿಕ್ಷಕರನ್ನು ನೇಮಿಸಿ ಅಭ್ಯಾಸವನ್ನು ಹೇಳಿಕೊಡುತ್ತಿದ್ದೇವೆ. ಈ ವಿಚಾರದಲ್ಲಿ ನಮಗೆ ಅತ್ಯಂತ ಸ್ಫೂರ್ತಿದಾಯಕ ವ್ಯಕ್ತಿಯೆಂದರೆ ಥಾಮಸ್ ಆಲ್ವಾ ಎಡಿಸನ್. ಆತ ಶಾಲೆಗೆ ಹೋದದ್ದು ಬಹಳ ಕಡಿಮೆ ಅವಧಿಗೆ ಮಾತ್ರ. ಆದರೆ ಅವರು ಬಲ್ಬನ್ನು ಕಂಡು ಹಿಡಿದರು. ಜಗತ್ತಿಗೆ ಕತ್ತಲೆಯನ್ನು ದೂರ ಮಾಡಿ ಬೆಳಕನ್ನು ನೀಡಿದಂತಹ ಕೀರ್ತಿ ಥಾಮಸ್ ಆಲ್ವಾ ಎಡಿಸನ್ ಅವರಿಗೆ ಸಲ್ಲುತ್ತದೆ. ನಮ್ಮ ನಡುವೆಯೂ ಸಹ ಅಂತಹ ವಿದ್ಯಾರ್ಥಿಗಳು ಇದ್ದಿರಬಹುದು, ಅವರ ಕೌಶಲ್ಯಕ್ಕೆ ಪ್ರೋತ್ಸಾಹ ಬೇಕಿರುತ್ತದೆ, ನಾವು ಸಿ.ಎಂ.ಎಸ್. ಫೌಂಡೇಶನ್ ಸಹಯೋಗದಿಂದ ಈ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದ್ದೇವೆ.

ಮನುಷ್ಯನ ಬದುಕಿಗೆ ಉಸಿರಾಡಲು ಗಾಳಿ ಎಷ್ಟು ಮುಖ್ಯವೋ ಅದರ ತರುವಾಯ ನೀರು ಸಹ ಅಷ್ಟೇ ಮುಖ್ಯವಾಗಿದೆ. ವಾರ್ಷಿಕದಂತೆ ಈ ಬಾರಿ ಸಹ ಉತ್ತರಕನ್ನಡ, ಹಾವೇರಿ, ಧಾರವಾಡ ಮತ್ತು ಶಿವಮೊಗ್ಗ ಜಿಲ್ಲೆಗಳ ತಾಲೂಕುಗಳಲ್ಲಿ 35ಕ್ಕೂ ಹೆಚ್ಚಿನ ಕೆರೆಗಳನ್ನು ರೈತರ ಸಹಭಾಗಿತ್ವದೊಂದಿಗೆ ಹೂಳೆತ್ತಿ ಅಭಿವೃದ್ಧಿಪಡಿಸಿದ್ದೇವೆ. ಶಿರಸಿ, ಸಿದ್ದಾಪುರ, ಯಲ್ಲಾಪುರ, ಮುಂಡಗೋಡು, ಹಳಿಯಾಳ ತಾಲೂಕುಗಳಲ್ಲಿ 200 ಕ್ಕೂ ಅಧಿಕ ಕೃಷಿ ಹೊಂಡಗಳನ್ನು ರೈತರಿಗೆ ನಿರ್ಮಿಸಿಕೊಟ್ಟು ರೈತಾಪಿ ಕೆಲಸಕ್ಕೆ ಸಣ್ಣ ಅಳಿಲು ಸೇವೆ ಮಾಡಿದಂತಹ ತೃಪ್ತಿ ನಮಗಿದೆ.

ಕಳೆದ ಎರಡೂವರೆ ದಶಕಗಳಿಗಿಂತಲೂ ಹೆಚ್ಚು ನಾನು ವಿವಿಧ ಸಂಘಗಳು, ಸಂಸ್ಥೆಗಳು ಹಾಗೂ ಮನುವಿಕಾಸ ಸಂಸ್ಥೆಯಲ್ಲಿ ಸಾಮಾಜಿಕ ಕೆಲಸ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದೇನೆ. ನನ್ನ ಈ ಸಮಾಜದ ಕಳಕಳಿಯ ಸೇವೆಯನ್ನು ಮೆಚ್ಚಿ ನಾಡಿನ ಹೆಸರಾಂತ ಪತ್ರಿಕೆಗಳಲ್ಲಿ ಒಂದಾದ ವಿಶ್ವವಾಣಿ ದಿನಪತ್ರಿಕೆಯು ದೂರದ ರಷ್ಯಾ ದೇಶದ ರಾಜಧಾನಿ ಮೊಸ್ಕೋಕ್ಕೆ ಕರೆದುಕೊಂಡು ಹೋಗಿ ಪ್ರಶಸ್ತಿಯನ್ನು ನೀಡಿ ಗೌರವಿಸಿರುವುದು ನನಗೆ ಬಹಳ ಸಂತೋಷ ತಂದಿದೆ. ನನ್ನ ಸೇವೆಯನ್ನ ಗುರುತಿಸಿ ಗೌರವಿಸಿದಂತಹ ಖ್ಯಾತ ಲೇಖಕ ವಿಶ್ವೇಶ್ವರ ಭಟ್ಟರಿಗೂ ಹಾಗೂ ಹಿರಿಯ ಪತ್ರಕರ್ತರಾದ ರಾಜು ಅಡಕಳ್ಳಿ ಅವರಿಗೂ ನಾನು ಆಭಾರಿ.

ಇತ್ತೀಚಿನ ದಿನಮಾನಗಳಲ್ಲಿ ಉತ್ತಮ ಫಲವತ್ತಾದ ಗದ್ದೆಯನ್ನು ಹೊಂದಿರುವಂತಹ ರೈತರ ಕಾರ್ಮಿಕರ ಕೊರತೆಯಿಂದಲೋ ಪ್ರಾಣಿ ಪಕ್ಷಿಗಳ ಉಪಟಳದಿಂದಲೋ ಭತ್ತದ ಬೇಸಾಯ ಪದ್ಧತಿಯಿಂದ ದೂರ ಸರಿಯುತ್ತಿದ್ದಾರೆ. ರೈತರು ಆರ್ಥಿಕವಾಗಿ ಸುಧಾರಿಸಿಕೊಳ್ಳಲು ಯಾವುದೇ ಬೆಳೆಯನ್ನ ಬೆಳೆಯಬಹುದು ಆದರೆ ಮೂರೊತ್ತು ಊಟ ಮಾಡಲು ಭತ್ತವನ್ನು ಬೆಳೆಯಲೇಬೇಕು. ಇತ್ತೀಚಿಗೆ ಹಲವು ಕಡೆಗಳಲ್ಲಿ ಶ್ರೀ ಪದ್ಧತಿಯ ಭತ್ತದ ನಾಟಿ ಕ್ರಮವನ್ನು ಕೈ ಬಿಟ್ಟಿದ್ದಾರೆ. ಹೆಚ್ಚು ಭತ್ತದ ಉತ್ಪಾದನೆಯನ್ನು ಶ್ರೀ ಪದ್ಧತಿಯಲ್ಲಿ ಮಾಡಬಹುದಾಗಿದೆ. ಹಾಗಾಗಿ ರೈತರಿಗೆ ಆ ಕುರಿತಾದಂತಹ ಜಾಗೃತಿಯನ್ನು ಮೂಡಿಸಿ ಮತ್ತೆ ಶ್ರೀ ಪದ್ಧತಿಯಲ್ಲಿ ಭತ್ತ ಬೆಳೆಯಲು ಸಂಸ್ಥೆ ವತಿಯಿಂದ ಉತ್ತೇಜನ ನೀಡುತ್ತಿದ್ದೇವೆ.

ಸಾಮಾಜಿಕ ಕ್ಷೇತ್ರದಲ್ಲಿ ಇನ್ನೂ ಹೆಚ್ಚಿನ ಯೋಜನೆಗಳ ರೂಪಿಸಿ ಅನುಷ್ಠಾನಗೊಳಿಸುವ ಆಶಯ ನನ್ನದು, ನಿಮ್ಮೆಲ್ಲರ ಸಹಾಯ, ಸಹಕಾರ, ಪ್ರೋತ್ಸಾಹ ಆಶಿಸುತ್ತೇನೆ.

**ಧನ್ಯವಾದಗಳೊಂದಿಗೆ**
ಗಣಪತಿ ಭಟ್ಟ
ನಿರ್ದೇಶಕರು, ಮನುವಿಕಾಸ

# ಮನುವಿಕಾಸ
# ಸಂಸ್ಥೆಯ ನಿರ್ದೇಶಕ
# ಗಣಪತಿ ಭಟ್ಟರೊಂದಿಗೆ

**ಸಂದರ್ಶಕರು : ವಾರ್ತಾಪತ್ರಿಕಾ ಸಂಪಾದಕೀಯ ಮಂಡಳಿ**



**ಸಂಚಿಕೆಯ ವಿಶೇಷ ಸಂದರ್ಶನ**

**ಮನುವಿಕಾಸ ಸಂಸ್ಥೆ ಕೆರೆಗಳ ಪುನರುಜ್ಜೀವನ ಕಾರ್ಯಕ್ರಮ ಪ್ರಾರಂಭಿಸುವಾಗ ಜನರ ಅಭಿಪ್ರಾಯ ಹೇಗಿತ್ತು?**

ಮನುವಿಕಾಸ ಸಂಸ್ಥೆಯು ಕೆರೆಗಳಲ್ಲಿನ ಹೂಳೆತ್ತಿ ಅಭಿವೃದ್ಧಿಪಡಿಸಬೇಕೆಂದು 2014-15 ನೇ ಸಾಲಿನಲ್ಲಿ ಹಳ್ಳಿಗಳ ಪ್ರವಾಸವನ್ನು ಕೈಗೊಂಡಿತು. ರೈತರನ್ನು ಭೇಟಿಯಾಗಿ ಚರ್ಚೆ ನಡೆಸಿದಾಗ ಕೆರೆಯ ಹೂಳಿನ ಮಣ್ಣನ್ನು ಜಮೀನಿಗೆ ಬಳಕೆ ಮಾಡುವುದರಿಂದ ಯಾವುದೇ ಪ್ರಯೋಜನವಿಲ್ಲ ಎಂಬ ಅಭಿಪ್ರಾಯವನ್ನು ಕೆಲ ರೈತರು ವ್ಯಕ್ತಪಡಿಸಿದ್ದರು. ಕಂತ್ರಾಜಿ ಎಂಬ ಊರಿಗೆ ಭೇಟಿ ನೀಡಿದಾಗ ಅಲ್ಲಿನ ಹಿರಿಯ ರೈತ ಮುಖಂಡರಾದಂತಹ ಶಂಕರಗೌಡರೂ ಸಹ ಕೆರೆಯ ಮಣ್ಣಿನಿಂದ ಹೆಚ್ಚಿನ ಅನುಕೂಲ ಲಭ್ಯವಿಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರು.

ಪ್ರಾಯೋಗಿಕವಾಗಿ ರೈತರ ಜಮೀನಿಗೆ ಕೆರೆಯ ಮಣ್ಣನ್ನು ಹಾಕಿಸಿ ಆ ಕುರಿತಾಗಿ ಅಧ್ಯಯನವನ್ನು ನಡೆಸಿದಾಗ ಪ್ರತಿಶತ 40% ರಷ್ಟು ಇಳುವರಿ ಹೆಚ್ಚಾಗಿ ಕಂಡುಬಂದಿತು. ನಂತರದಲ್ಲಿ ರೈತ ಮುಖಂಡ ಶಂಕರಗೌಡರೇ ಮುಂದಾಗಿ ಆ ಊರಿನ ರೈತರನ್ನು ಸಂಘಟಿಸಿ 3 ಕೆರೆಗಳನ್ನು ಮನುವಿಕಾಸದೊಂದಿಗೆ ಅಭಿವೃದ್ಧಿಪಡಿಸಿದ್ದಾರೆ. ಕೆರೆಗಳ ಬದುವಿನ ಮೇಲೆ ಗಿಡಗಳನ್ನು ನೆಟ್ಟು, ಪೋಷಿಸಿದ್ದರಿಂದ ಅವು ಇಂದು ಮರಗಳಾಗಿ ನಿಂತಿವೆ. ಕೇವಲ ವರ್ಷಕ್ಕೆ ಒಂದೇ ಬೆಳೆಯನ್ನು ಪಡೆಯುತ್ತಿದ್ದಂತಹ ಕಂತ್ರಾಜಿ ಗ್ರಾಮದ ರೈತರು, ಇಂದು ಕೆರೆಯನ್ನು ಹೂಳೆತ್ತಿದ ಬಳಿಕ ಮಣ್ಣಿನ ಬಳಕೆಯಿಂದ ಮತ್ತು ಕೆರೆಯಲ್ಲಿ ಸಮೃದ್ಧವಾಗಿ ನೀರು ತುಂಬಿದ್ದರಿಂದ ವರ್ಷಕ್ಕೆ ಎರಡು ಬೆಳೆಗಳನ್ನು ಬೆಳೆಯುವುದರ ಜೊತೆಗೆ ಮಿಶ್ರ ಬೆಳೆಗಳಿಗೆ ಹೆಚ್ಚಿನ ಒಲವನ್ನು ತೋರಿದ್ದಾರೆ. ಇದೇ ಮಾದರಿಯಲ್ಲಿ ಬನವಾಸಿ ಭಾಗದ ನರೂರು, ಭಾಶಿ ಮತ್ತು ತಿಗಣಿ ಗ್ರಾಮದಲ್ಲಿಯೂ ಸಹ ಕೆರೆ ಅಭಿವೃದ್ಧಿಯೊಂದಿಗೆ ರೈತರ ಆದಾಯ ದ್ವಿಗುಣಗೊಂಡಿರುವುದನ್ನು ನಾವು ಕಾಣಬಹುದಾಗಿದೆ.



### ಸರ್ಕಾರ ಕೆರೆ ಅಭಿವೃದ್ಧಿಯಲ್ಲಿ ಕಾರ್ಯನಿರ್ವಹಿಸುತ್ತಿಲ್ಲವೇ? ಸರ್ಕಾರ ಕೆರೆ ಅಭಿವೃದ್ಧಿಯನ್ನು ಯಾಕೆ ವಿಶೇಷವಾಗಿ ಕಾಣುತ್ತಿಲ್ಲ?

ಸರ್ಕಾರ ಕೂಡ ಇತ್ತೀಚಿಗೆ ಕೆರೆ ಅಭಿವೃದ್ಧಿಯ ಕುರಿತು ಆಸಕ್ತಿಯನ್ನು ವಹಿಸುತ್ತಿದೆ. ಕೆರೆಯನ್ನು ಹೂಳೆತ್ತುವ ಕಾರ್ಯಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡದೇ, ಕೆರೆಗಳಿಗೆ ಪಿಚ್ಚಿಂಗ್ ಮಾಡುವಂಥದ್ದು ಮತ್ತು ಸಿಮೆಂಟ್‌ನ ಕಾಲುವೆಗಳನ್ನು ನಿರ್ಮಾಣ ಮಾಡುವಂತಹ ಕೆಲಸಗಳಿಗೆ ಹೆಚ್ಚಿನ ಮುತುವರ್ಜಿಯನ್ನು ವಹಿಸಿದೆ. ಹತ್ತಿರದ ಹೊಳೆ ಅಥವಾ ನದಿಗಳಿಗೆ ಚೆಕ್ ಡ್ಯಾಮ್‌ಗಳನ್ನು ನಿರ್ಮಾಣ ಮಾಡಿ, ಸಾವಿರಾರು ಕೋಟಿ ರೂಪಾಯಿಗಳನ್ನು ವ್ಯಯಿಸಿ, ನೀರನ್ನು ಎತ್ತಿ, ಕೆರೆಗಳಿಗೆ ತುಂಬಿಸುವಂತಹ ಯೋಜನೆಯನ್ನು ಅಲ್ಲಲ್ಲಿ ಕಾರ್ಯರೂಪಕ್ಕೆ ತರುತ್ತಿದೆ. ಆದರೆ ಯಾವ ಸಂದರ್ಭದಲ್ಲಿ ಕೆರೆಗಳಿಗೆ ನೀರನ್ನು ತುಂಬಿಸಬೇಕೋ ಆ ಸಮಯದಲ್ಲಿ ಹೊಳೆ ಅಥವಾ ನದಿಗಳಲ್ಲಿ ನೀರಿನ ಪಾತ್ರ ಕಡಿಮೆಯಾಗಿರುತ್ತದೆ. ಇದರಿಂದ ಕೆರೆಗಳಿಗೆ ನೀರನ್ನು ತುಂಬಿಸಲು ಕೆಲವು ಕಡೆಗಳಲ್ಲಿ ಸಾಧ್ಯವಾಗುತ್ತಿಲ್ಲ ಎಂಬ ಮಿಶ್ರ ಪ್ರತಿಕ್ರಿಯೆ ಜನರಿಂದ ಸಿಗುತ್ತಿದೆ.  ಕೆರೆಗಳಿಗೆ ನೀರನ್ನು ಒದಗಿಸುವ ಜಲಾನಯನ ಪ್ರದೇಶಗಳಿಗೆ ಗಿಡಮರಗಳನ್ನು ನೆಡುವಂತದ್ದು, ಕಾಲುವೆಗಳನ್ನು ನಿರ್ಮಾಣ ಮಾಡುವಂತದ್ದು ಮತ್ತು ತದನಂತರದಲ್ಲಿ ಕೆರೆಗಳನ್ನು ಹೂಳೆತ್ತಿ  ಅಭಿವೃದ್ಧಿಪಡಿಸಬೇಕಿದೆ. ಆ ಊರಿನ ರೈತರನ್ನು ಒಗ್ಗೂಡಿಸಿ, ಕೆರೆಯ ಮುಂದಿನ ಸುಸ್ಥಿರತೆಯನ್ನು ಕಾಯ್ದುಕೊಳ್ಳುವಂತಹ ಉದ್ದೇಶದಿಂದ ಕೆರೆ ಕಮೀಟಿಗಳನ್ನು ರಚನೆ ಮಾಡಬೇಕಿದೆ.

### ಹಳ್ಳಿಗಳಲ್ಲಿ ಕೆರೆ ಅಭಿವೃದ್ಧಿ ಕುಂಠಿತವಾಗಿದೆ ಏಕೆ?

ಹಳ್ಳಿಗಳಲ್ಲಿ ಕೆರೆಯ ಅಭಿವೃದ್ಧಿ ಕುಂಠಿತವಾಗಲು ಕಾರಣ ಏನೆಂದರೆ ಕೆರೆಗಳ ಮಾಲೀಕತ್ವದ ಗೊಂದಲ. ಸ್ವಾತಂತ್ರ್ಯ ಪೂರ್ವದಲ್ಲಿ ಕೆರೆಗಳು ಸಮುದಾಯದ ಮಾಲೀಕತ್ವವನ್ನು ಹೊಂದಿದ್ದವು. ಸ್ವಾತಂತ್ರ್ಯಾನಂತರದಲ್ಲಿ ಇಲಾಖಾವಾರು ಅಂದರೆ ಗ್ರಾಮ ಪಂಚಾಯಿತಿ, ಜಿಲ್ಲಾ ಪಂಚಾಯಿತಿ, ಸಣ್ಣ ನೀರಾವರಿ ಇಲಾಖೆ, ಲೋಕೋಪಯೋಗಿ ಇಲಾಖೆ ಹೀಗೆ ಬೇರೆ ಬೇರೆ ಇಲಾಖೆಗಳ ಮಾಲೀಕತ್ವವನ್ನ ಅದು ಒಳಗೊಂಡಿದೆ. ಇಲಾಖೆಗಳ ಪ್ರತಿನಿಧಿಗಳು ಕೆರೆಗಳ ಕುರಿತಾಗಿ ಹೆಚ್ಚಿನ ಕಾಳಜಿಯನ್ನು ವಹಿಸಿಲ್ಲ. ತದನಂತರದಲ್ಲಿ ಸಮುದಾಯದವರಿಗೂ ಕೂಡ ನಮ್ಮೂರ ಕೆರೆ ಎಂಬ ಭಾವನೆಯು ಕಳೆಗುಂದುತ್ತಾ ಬಂತು. ಇದರ ಫಲಶ್ರುತಿಯಾಗಿ ಕೆರೆಗಳು ಅವಸಾನದ ಅಂಚಿನ ದಾರಿ ಹಿಡಿದವು. ಕೆರೆಗಳಿಗೆ ಕಸದ ತ್ಯಾಜ್ಯವನ್ನು ತಂದು ಹಾಕುವುದು, ಅವೈಜ್ಞಾನಿಕ ರೀತಿಯಲ್ಲಿ ಕೆರೆಯನ್ನು ಅಗೆಯುವುದು ಮಾಡಿದಾಗ, ಯಾವೊಬ್ಬ ಜನ ಸಾಮಾನ್ಯನೂ ಸಹ ಆ ಕುರಿತಾಗಿ ತಲೆಕೆಡಿಸಿಕೊಳ್ಳಲಿಲ್ಲ. ಕಾರಣವೇನೆಂದರೆ ಸಂಬಂಧಪಟ್ಟ ಇಲಾಖೆಯವರು ಅದಕ್ಕೆ ಹೊಣೆ ಎಂಬ ಭಾವನೆ ಜನರಲ್ಲಿ ಮೂಡಿದೆ. ಕೆಲವು ವರ್ಷಗಳ ಹಿಂದೆ ಜಲ ಸಂವರ್ಧನೆ ಯೋಜನೆ ಅನುಷ್ಠಾನಕ್ಕೆ ಬಂತು. ವಿಶ್ವ ಬ್ಯಾಂಕಿನವರು ಕೆರೆಗಳ ಮಹತ್ವವನ್ನು ಸಾರಿ ಸಾರಿ ಹೇಳುವಂತಹ ಕೆಲಸವನ್ನು ಮಾಡಿದರು. ಕರ್ನಾಟಕ ಸರ್ಕಾರವು ವಿಶ್ವ ಬ್ಯಾಂಕಿನ ಜೊತೆಗೂಡಿ ನದಿ ಪಾತ್ರದ ಕಾಲುವೆ, ಬದುಗಳನ್ನು ದುರಸ್ತಿ ಮಾಡಿತು. ಆದರೆ ಕೆರೆಗಳನ್ನು ಹೂಳೆತ್ತಿ ಅಭಿವೃದ್ಧಿಪಡಿಸಲು ಸಾಧ್ಯವಾಗಲಿಲ್ಲ. ಜಲ ಸಂವರ್ಧನೆ ಯೋಜನೆಗೆ ಕೋಟ್ಯಾನುಕೋಟಿ ರೂಪಾಯಿಗಳನ್ನು ವ್ಯಯಿಸಿದರೂ ಸಹ ಅದು ಯಾವುದೇ ದೊಡ್ಡ ಬದಲಾವಣೆಗೆ ಸಾಕ್ಷಿಯಾಗಲಿಲ್ಲ.



**ಕೆರೆ ಅಭಿವೃದ್ಧಿಪಡಿಸಿದ ನಂತರ ಮನುವಿಕಾಸ ಸಂಸ್ಥೆ ಆ ಊರಿಗೆ ನೀಡಿರುವ ಇನ್ನಿತರ ಯೋಜನೆಗಳೇನು?**

ಮನುವಿಕಾಸ ಸಂಸ್ಥೆಯು ಕೆರೆ ಪುನರುಜ್ಜೀವನ ಕಾರ್ಯಕ್ರಮವನ್ನು ತನ್ನ ಅನುಷ್ಠಾನದ ಮೊದಲ ಹೆಜ್ಜೆಯಾಗಿ ಪರಿಗಣಿಸುತ್ತದೆ. ಒಂದು ಊರಿನಲ್ಲಿ ಕೆರೆಗಳ ಪುನರುಜ್ಜೀವನವು ಅಲ್ಲಿನ ಜನರ ಜೀವನಮಟ್ಟವನ್ನು ನಿರ್ಧಾರ ಮಾಡುವಂತಹ ಪ್ರಮುಖ ಘಟ್ಟವಾಗಿರುತ್ತದೆ. ಪ್ರತಿಯೊಂದು ನಾಗರಿಕತೆಯೂ ಕೂಡ ನದಿ, ಹೊಳೆ, ಹಳ್ಳಕೊಳ್ಳಗಳ ಅಂಚಿನಲ್ಲಿಯೇ ಬೆಳೆದು ಬಂದಿರುವಂಥದ್ದನ್ನು ನಾವು ಇತಿಹಾಸದಲ್ಲಿ ಕಾಣಬಹುದು. ಕೆರೆ ಅಭಿವೃದ್ಧಿಯಿಂದ ಕೇವಲ ಕೃಷಿಕರಿಗೆ ಮಾತ್ರ ಅನುಕೂಲವಾಗುವುದಿಲ್ಲ. ಕೃಷಿ ಕಾರ್ಮಿಕರಿಗೂ, ಭೂ ರಹಿತ ಕುಟುಂಬದವರಿಗೂ ಕೂಡ ಅನುಕೂಲವಾಗುವುದನ್ನು ನಾವು ಕಾಣಬಹುದಾಗಿದೆ. ಹೈನುಗಾರಿಕೆ ಮಾಡುತ್ತಿರುವವರಿಗೆ, ಕುರಿ ಸಾಕಾಣಿಕೆ ಮಾಡುತ್ತಿರುವವರಿಗೆ, ಕೆರೆ ಅಭಿವೃದ್ಧಿಯಿಂದಾಗಿ ಮೇವಿನ ಲಭ್ಯತೆ ಹೆಚ್ಚುತ್ತದೆ. ಜೊತೆಯಲ್ಲಿ ದನಕರುಗಳಿಗೆ ಕುಡಿಯಲು ನೀರಿನ ಸೆಲೆಯು ಸಿಗುತ್ತದೆ. ಮನುವಿಕಾಸ ಸಂಸ್ಥೆಯು ಕೇವಲ ಕೃಷಿ ಕುಟುಂಬಗಳನ್ನು ಮಾತ್ರ ಸಂಪರ್ಕಿಸದೇ, ಭೂರಹಿತ ಕುಟುಂಬಗಳಿಗೂ ಸಹ ಸ್ವಸಹಾಯ ಸಂಘಗಳನ್ನು ರಚಿಸಿಕೊಳ್ಳಲು ಅನುವು ಮಾಡಿಕೊಟ್ಟಿದೆ. ಮಹಿಳೆಯರಿಗೆ ಹೊಲಿಗೆ, ಹೈನುಗಾರಿಕೆ ಮೊದಲಾದಂತಹ ಸ್ವ-ಉದ್ಯೋಗ ತರಬೇತಿಗಳನ್ನು, ಸ್ವ-ಉದ್ಯೋಗಕ್ಕಾಗಿ ಸಾಲ ಸೌಲಭ್ಯವನ್ನೂ ಸಹ ನೀಡುತ್ತಾ ಬಂದಿದೆ.

ರೈತರೆಲ್ಲರನ್ನೂ ಒಗ್ಗೂಡಿಸಿ ರೈತ ಉತ್ಪಾದಕ ಕಂಪನಿಗಳನ್ನು ಈಗಾಗಲೇ ಆರಂಭಿಸಿದ್ದೇವೆ. ಅವರಿಗೆ ಕಡಿಮೆ ದರದಲ್ಲಿ ಸಾವಯವ ಗೊಬ್ಬರಗಳನ್ನು ಮತ್ತು ಬೀಜಗಳನ್ನು ಹಾಗೂ ಕಡಿಮೆ ದರದಲ್ಲಿ ಬಾಡಿಗೆಗೆ ಯಂತ್ರೋಪಕರಣಗಳ ಸೇವೆಯನ್ನು ಒದಗಿಸಿದೆ. ಮಹಿಳೆಯರಿಗೆ ಕೈತೋಟ ನಿರ್ಮಾಣಕ್ಕೆ ಸಂಬಂಧಪಟ್ಟಂತಹ ತರಬೇತಿಗಳನ್ನು ನೀಡಿ, ಅವರಿಗೆ ತರಕಾರಿ ಬೀಜಗಳನ್ನು ಒದಗಿಸುವಂಥದ್ದು, ವಿವಿಧ ತಳಿಯ ತರಕಾರಿ ಬೀಜ ಮತ್ತು ಭತ್ತದ ತಳಿಗಳನ್ನು ಸಂಗ್ರಹಿಸಲು ಪ್ರೋತ್ಸಾಹಿಸಿದೆ. ಭತ್ತದಲ್ಲಿ ಹೆಚ್ಚಿನ ಇಳುವರಿಯನ್ನು ಪಡೆಯುವ ಉದ್ದೇಶಕ್ಕಾಗಿ ರೈತರಿಗೆ ಭತ್ತದಲ್ಲಿ ಶ್ರೀ ಪದ್ಧತಿಯನ್ನು ಮತ್ತು ಅದರ ಮಹತ್ವವನ್ನು ತಿಳಿಸಿ ಪ್ರೋತ್ಸಾಹಿಸಲಾಗುತ್ತಿದೆ.

ಹಳ್ಳಿಗಳಲ್ಲಿ ಭೂರಹಿತ ಕುಟುಂಬದವರು ಕೃಷಿ ಜಮೀನಿನಲ್ಲಿ ಕಾರ್ಮಿಕರಾಗಿ ಕೆಲಸ ಮಾಡುತ್ತಾರೆ. ಅವರಿಗೆ ಬಿತ್ತನೆ ಅಥವಾ ಬೆಳೆ ಕೊಯ್ಲಿನ ನಂತರ ಕೆಲಸವಿಲ್ಲದೇ ಬೇರೆ ಊರುಗಳಿಗೆ ಕೆಲಸಕ್ಕಾಗಿ ಗುಳೆ ಹೋಗುವುದನ್ನು ತಪ್ಪಿಸುವ ಉದ್ದೇಶದಿಂದ ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮದ ಅಡಿಯಲ್ಲಿ ಕೆಲಸದ ಕುರಿತಾದಂತಹ ಮಾಹಿತಿಯನ್ನು ನೀಡಿ, ಸ್ಥಳೀಯವಾಗಿಯೇ ಕೆಲಸ ದೊರೆಯುವಂತೆ ಸಂಸ್ಥೆಯು ಶ್ರಮಿಸುತ್ತಿದೆ. ಕೊಟ್ಟಿಗೆ ನಿರ್ಮಾಣ, ಬಚ್ಚಲ ಗುಂಡಿ ನಿರ್ಮಾಣ, ಶೌಚಾಲಯಗಳ ನಿರ್ಮಾಣ ಈ ಮೊದಲಾದಂತಹ ವೈಯಕ್ತಿಕ ಕೆಲಸಗಳಿಗೂ ಸಹ ಜನರಿಗೆ ಜಾಗೃತಿಯನ್ನು ಮೂಡಿಸಿ ಗ್ರಾಮ ಪಂಚಾಯಿತಿಯ ಮೂಲಕವಾಗಿ ಕೆಲಸವನ್ನು ನೀಡಲಾಗುತ್ತಿದೆ.

ಗ್ರಾಮೀಣ ಭಾಗದ ಯುವಕ ಯುವತಿಯರಿಗೆ ಕೌಶಲ್ಯಾಭಿವೃದ್ಧಿ ತರಬೇತಿಯನ್ನು ನೀಡುವ ಸಲುವಾಗಿ ಫೋಟೋಗ್ರಫಿ, ವಿಡಿಯೋ ಎಡಿಟಿಂಗ್, ಆರಿ ವರ್ಕ್, ಪ್ಲಂಬಿಂಗ್, ಕಛೇರಿ ನಿರ್ವಹಣಾ ತರಬೇತಿ, ಹೀಗೆ ಇನ್ನೂ ಮುಂತಾದ ಬಗೆಯ ತರಬೇತಿಗಳನ್ನು ನೀಡಿ ಸ್ವ-ಉದ್ಯೋಗಿಗಳಾಗಲು ಪ್ರೋತ್ಸಾಹವನ್ನು ನೀಡುತ್ತಿದೆ.







### ಒಂದು ಕೆರೆಯನ್ನು ತಾಂತ್ರಿಕವಾಗಿ ಅಭಿವೃದ್ಧಿಪಡಿಸಲು ಇರುವ ಮಾರ್ಗ ಯಾವುದು?

ಕೆರೆಯ ನೀರು ಬರುವಂತಹ ಜಲಾನಯನ ಪ್ರದೇಶವನ್ನು ಗುರುತಿಸಿ ಮೊದಲು ಅದನ್ನು ಅಭಿವೃದ್ಧಿಪಡಿಸುವಂತಹ ಕೆಲಸವನ್ನು ಮಾಡಬೇಕಾಗುತ್ತದೆ. ಕೆರೆಯ ಹೂಳೆತ್ತಿದಂತಹ ಮಣ್ಣು ಅಥವಾ ಮಣ್ಣಿನ ಸವೆತಗಳಿಂದ, ಕೆರೆಗೆ ಮತ್ತೆ ಮಣ್ಣು ಸೇರ್ಪಡೆ ಆಗದಂತೆ, ಅರಣ್ಯ ಆಧಾರಿತ ಕೃಷಿಯನ್ನು ಮಾಡುವಂತಹ ಪರಿಕಲ್ಪನೆಯನ್ನು ರೈತರಿಗೆ ಮೂಡಿಸಬೇಕಾಗುತ್ತದೆ. ಕೆರೆಗಳ ಬದುಗಳ ಮೇಲೆ ತೀರಾ ಬೃಹದಾಕಾರವಾಗಿ ಬೆಳೆಯದ, ಸಣ್ಣ ಪ್ರಮಾಣದ ಗಿಡಮರಗಳನ್ನು ಬೆಳೆಸುವಂಥದ್ದನ್ನು ಮಾಡಬೇಕಾಗುತ್ತದೆ. ಕೆರೆಗಳಿಗೆ ನೀರನ್ನು ಹೊತ್ತು ತರುವಂತಹ ಕಾಲುವೆಗಳು ಕೆಲವು ಕಡೆಗಳಲ್ಲಿ ಅತಿಕ್ರಮಣ ಆಗಿರುತ್ತದೆ ಅಥವಾ ಹೂಳು ತುಂಬಿರುತ್ತದೆ. ಅದನ್ನು ಕೂಡ ಅಭಿವೃದ್ಧಿಪಡಿಸುವಂತಾಗಬೇಕು. ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿನ ನರೇಗಾ ಯೋಜನೆ ಅಡಿಯಲ್ಲಿಯೇ ರೈತರೇ ಈ ಕೆಲಸವನ್ನು ಮಾಡಿಕೊಳ್ಳಬಹುದಾಗಿದೆ. ಕೆರೆಯ ಬದುವಿನಿಂದ 15 ಮೀಟರ್ ದೂರದಲ್ಲಿಂದ ಹೂಳನ್ನು ತೆಗೆಯುವಂತಹದ್ದು ಉತ್ತಮ ಕಾರ್ಯವಾಗಿರುತ್ತದೆ. ಪ್ರತಿಯೊಂದು ಕೆರೆಗೂ ಕೂಡ ಅದರದೇ ಆದಂತಹ ಮದರ್‌ಅರ್ಥ್ ಅಥವಾ ತಾಯಿಮಣ್ಣು ಎಂದು ಇರುತ್ತದೆ. ಅದಕ್ಕೆ ಯಾವುದೇ ಹಾನಿಯಾಗದ ರೀತಿಯಲ್ಲಿ ಹೂಳನ್ನು ತೆಗೆಯುವಂತಹ ಕಾರ್ಯವಾಗಬೇಕು. ಕೆರೆಯ ಮಣ್ಣು ರೈತರ ಜಮೀನಿಗೆ ಅನುಕೂಲವಾಗಿದೆಯೇ ಎಂಬುದನ್ನು ತಿಳಿಯಲು, ಮಣ್ಣು ಪರೀಕ್ಷೆಯನ್ನು ಮಾಡಿಸಿ ಹೂಳನ್ನು ತೆಗೆಯುವಂತದ್ದು, ವೈಜ್ಞಾನಿಕ ಪ್ರಕ್ರಿಯೆಯಲ್ಲಿನ ಪ್ರಮುಖ ಹಂತವಾಗಿದೆ. ಕೆರೆಯಲ್ಲಿ ಉತ್ತಮವಾಗಿ ನೀರು ಸಂಗ್ರಹಣೆಯಾಗಲು ಕೆರೆಯಲ್ಲಿನ ಔಟ್‌ಲೆಟ್ ಅಥವಾ ಕೋಡಿಯು ಸಮರ್ಪಕ ರೀತಿಯಲ್ಲಿ ಇರಬೇಕು. ಕೆರೆಯ ಬದುವು ದುರ್ಬಲವಾಗಿದ್ದರೆ ಕೆಲವೊಮ್ಮೆ ಸಣ್ಣ ಪ್ರಮಾಣದಲ್ಲಿ ನೀರು ಸೋರಿಕೆ ಆಗಬಹುದು. ಅವೆಲ್ಲವನ್ನು ಕೂಡ ನಾವು ಗಮನಿಸಬೇಕಾಗುತ್ತದೆ.

ಕೆರೆಗಳ ಅಭಿವೃದ್ಧಿಯನ್ನು ನೋಡಿಕೊಳ್ಳಲು ಕಮಿಟಿಗಳನ್ನು ರಚಿಸಬೇಕು. ಕೆರೆಗಳಿಗೆ ಬರುವಂತಹ ನೀರಿಗೆ ಚೆಕ್‌ಡ್ಯಾಂ ನಿರ್ಮಾಣ ಮಾಡುವುದರಿಂದ ಕಸಕಡ್ಡಿಗಳು ಕೆರೆಗೆ ಸೇರ್ಪಡೆ ಆಗುವಂತದ್ದು ಕಡಿಮೆಯಾಗುತ್ತದೆ ಮತ್ತು ಸ್ವಚ್ಛ ನೀರು ಕೆರೆಗೆ ಸೇರುತ್ತದೆ. ಕೆರೆ ತುಂಬಿ ಹೊರಹೋಗುವಂತಹ ಕೋಡಿ ಕಾಲುವೆಗಳು ಕೂಡ ಸಮರ್ಪಕ ರೀತಿಯಲ್ಲಿ ಇರಬೇಕು. ಕೆರೆಯ ಸುತ್ತಲಿನ ರೈತರ ಜಮೀನುಗಳಿಗೆ ನೀರು ಉಳಿಸುವಂತಹ ರೀತಿಯಲ್ಲಿ ಕಾಲುವೆಗಳ ನಿರ್ಮಾಣ ಮಾಡಿಕೊಳ್ಳುವುದು ಉತ್ತಮ. ಇದರಿಂದಾಗಿ ಕೆರೆಗೆ ಸಂಬಂಧಿತ ಕಟ್ಟಕಡೆಯ ರೈತನಿಗೂ ಸಹ ಕೆರೆಯ ನೀರನ್ನು ಪಡೆಯಲು ಅನುಕೂಲವಾಗುತ್ತದೆ. ಕೆರೆಗಳಿಗೆ ಮೀನುಗಳನ್ನು ಬಿಟ್ಟು ಅದರಿಂದ ಬಂದಂತಹ ಆದಾಯವನ್ನು ಕೆರೆಗಳ ಸುಸ್ಥಿರತೆಗೆ ಬಳಸಿಕೊಳ್ಳಬೇಕು. ಕೆರೆಗಳ ಮಾಲೀಕತ್ವವನ್ನು ಹೊಂದಿದಂತಹ ಇಲಾಖೆಯವರು ಆಗಾಗ ಕೆರೆಗಳಿಗೆ ಭೇಟಿ ನೀಡಿ ಕೆರೆಗಳ ಪರಿಸ್ಥಿತಿಯನ್ನು ಅಧ್ಯಯನ ಮಾಡಬೇಕು. ಜೊತೆಯಲ್ಲಿ ರೈತರೊಂದಿಗೆ ಚರ್ಚಿಸಿ ಮುಂದಿನ ಅಭಿವೃದ್ಧಿಯ ಕುರಿತಾಗಿ ಅವರು ಕ್ರಮವನ್ನು ಕೈಗೊಳ್ಳುವುದು ಒಳಿತು. ಯಾವುದೇ ವ್ಯಕ್ತಿಗಳು ಅವೈಜ್ಞಾನಿಕ ರೀತಿಯಲ್ಲಿ ಕೆರೆಯ ಹೂಳೆತ್ತುವಂತದ್ದು ಅಥವಾ ತ್ಯಾಜ್ಯಗಳನ್ನು ಕೆರೆಗೆ ತಂದು ಎಸೆಯುವಂತದ್ದನ್ನು ಮಾಡಿದರೆ ಕಾನೂನು ಉಲ್ಲಂಘನೆ ಮಾಡಿದಂತಾಗುತ್ತದೆ. ಜನರು ಒಗ್ಗೂಡಿಕೊಂಡು ಪರಸ್ಪರ ಸಹಕಾರ ಸಹಬಾಳ್ವೆಯಿಂದ ಕೂಡಿದ್ದಾಗ ಮಾತ್ರ ಹಳ್ಳಿಯ ಅಭಿವೃದ್ಧಿ ಹಾಗೂ ಕೆರೆಗಳ ಅಭಿವೃದ್ಧಿ ಮಾಡಲು ಅನುಕೂಲವಾಗುತ್ತದೆ.



# ಅವಸಾನದ ಬಿದರಕಟ್ಟಿ ಕೆರೆಗೆ ಪುನರುಜ್ಜೀವನದ ಹೊಸ ಕಳೆ







ಮನುವಿಕಾಸ ಸಂಸ್ಥೆಯು ಆಶ್ರಯಹಸ್ತ ಟ್ರಸ್ಟ್, ಬೆಂಗಳೂರು ಇವರ ಆರ್ಥಿಕ ಸಹಕಾರದೊಂದಿಗೆ ಹಾವೇರಿ ಜಿಲ್ಲೆಯ ಹಿರೇಕೆರೂರು ತಾಲೂಕಿನ ಬುರುಡಿಕಟ್ಟಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಬಿದರಕಟ್ಟಿಕೆರೆಯನ್ನು ರೈತರ ಸಹಭಾಗಿತ್ವದೊಂದಿಗೆ ಹೂಳೆತ್ತಿ ಅಭಿವೃದ್ಧಿಪಡಿಸಲು ಯೋಜನೆಯನ್ನು ರೂಪಿಸಿತ್ತು.

ಈ ಯೋಜನೆಯ ಪ್ರಮುಖ ಭಾಗವಾಗಿ ದಿನಾಂಕ 19/04/2025 ಶನಿವಾರದಂದು ಬುರುಡಿಕಟ್ಟಿ ಗ್ರಾಮದ ಬಿದರಗಟ್ಟಿಕೆರೆ ಹೂಳೆತ್ತುವ ಯೋಜನೆಯ ಪ್ರಾರಂಭೋತ್ಸವ ಕಾರ್ಯಕ್ರಮ ಆಯೋಜಿಸಲಾಗಿತ್ತು. ಕೆರೆ ಹೂಳುತ್ತುವ ಕಾರ್ಯಕ್ರಮಕ್ಕೆ ಪೂಜೆ ಸಲ್ಲಿಸುವ ಮೂಲಕ ಚಾಲನೆ ನೀಡಿ ನಟ ಹಾಗೂ ಮಾಜಿ ಸಚಿವ ಬಿ.ಸಿ. ಪಾಟೀಲ್ ಮಾತನಾಡಿ, ಮನುವಿಕಾಸ ಸಂಸ್ಥೆಯು ಹಾವೇರಿ ಜಿಲ್ಲೆಯ ಹಾನಗಲ್, ಬ್ಯಾಡಗಿ, ಹಿರೇಕೆರೂರು ತಾಲೂಕುಗಳಲ್ಲಿ ನೂರಾರು ಕೆರೆಗಳ ಹೂಳೆತ್ತಿ ಅಭಿವೃದ್ಧಿಪಡಿಸಿದ್ದು, ಅಂತರ್ಜಲ ಹೆಚ್ಚಿಸುವಂತಹ ಕಾರ್ಯಕ್ಕೆ ಹೆಚ್ಚು ಶ್ರಮವಹಿಸುತ್ತಿದೆ. ಅದರ ಜೊತೆಯಲ್ಲಿ ರೈತರ ಕೃಷಿ ಚಟುವಟಿಕೆಗಳಿಗೆ ಕೂಡ ಸಹಕಾರವನ್ನು ಒದಗಿಸಿರುವಂತದ್ದು ಶ್ಲಾಘನೀಯ ಎಂದು ಹೇಳಿದರು.

ಸಂಸ್ಥೆಯ ನಿರ್ದೇಶಕರಾದ ಗಣಪತಿ ಭಟ್ಟ ಮಾತನಾಡಿ, ಹಿಂದಿನ ಕಾಲದಲ್ಲಿ ಕೆರೆಗಳು, ದೊಡ್ಡ ದೊಡ್ಡ ಹೊಂಡಗಳು ಹಳ್ಳಿ ಒಳಗೆ ಇರುತ್ತಿದ್ದವು. ಮನುಷ್ಯನ ದುರಾಸೆಯಿಂದ ಎಲ್ಲಾ ಮುಚ್ಚಿ ಹೋಗಿವೆ, ಇದರಿಂದಾಗಿ ಅಂತರ್ಜಲ ಮಟ್ಟವು ದಿನದಿಂದ ದಿನಕ್ಕೆ ಕುಸಿಯುತ್ತಿದೆ, ಇದರ ಪರಿಣಾಮವಾಗಿ ಕಾಲಕಾಲಕ್ಕೆ ಸರಿಯಾಗಿ ಮಳೆ ಆಗದೆ ಇರುವುದು, ಅತಿಯಾದ ತಾಪಮಾನ ಎಲ್ಲವೂ ಉದ್ಭವಿಸುತ್ತದೆ.ಮನುವಿಕಾಸ ಸಂಸ್ಥೆಯು ರೈತರ ಸಹಭಾಗಿತ್ವದೊಂದಿಗೆ ಕೆರೆಗಳಲ್ಲಿನ ಹೂಳೆತ್ತಿ ಅಭಿವೃದ್ಧಿಪಡಿಸಿ ತದನಂತರ ರೈತರಿಗೆ ಹಾಗೂ ಗ್ರಾಮ ಪಂಚಾಯತಿಗಳಿಗೆ ಅದನ್ನು ಪುನರ್ ಹಸ್ತಾಂತರಿಸುವಂತಹ ಕಾರ್ಯವನ್ನು ಮಾಡುತ್ತಿದೆ. ಕೆರೆಗಳಲ್ಲಿ ಇನ್ನು ಹೆಚ್ಚಿನ ಅಭಿವೃದ್ಧಿಯನ್ನು ಸಾಧಿಸಿ ಸುಸ್ಥಿರತೆಯನ್ನು ಕಾಪಾಡಿಕೊಂಡು ಹೋಗುವುದು ಅಲ್ಲಿನ ರೈತರು ಮತ್ತು ಜನಪ್ರತಿನಿಧಿಗಳ ಕರ್ತವ್ಯವಾಗಿದೆ ಎಂದರು.

ಈ ಸಂದರ್ಭದಲ್ಲಿ ಕೆರೆ ಅಭಿವೃದ್ಧಿ ಸಮಿತಿಯ ಅಧ್ಯಕ್ಷ ಶೇಕಪ್ಪ ಬೆಳಗಿ, ಗ್ರಾಮ ಪಂಚಾಯತಿ ಅಧ್ಯಕ್ಷ ರಮೇಶ್ ಮೇಗಳಮನಿ ರೈತ ಮುಖಂಡರಾದ ಯಶೋಧರ ಸಾಬಲೂರು, ಉಳಿವೆಪ್ಪ ಸುತ್ತಕೋಟಿ, ಲೋಕಪ್ಪ ಮರಿಗೌಡ್ರು, ಭೀಮಪ್ಪ ದೊಡ್ಡಗೌಡ್ರು, ಕುಬೇರಗೌಡ, ನಾಗರಾಜ್ ಮೊಳೂರು ಹಾಗೂ ಮನುವಿಕಾಸ ಸಂಸ್ಥೆ ಸಿಬ್ಬಂದಿಗಳು ಉಪಸ್ಥಿತರಿದ್ದರು.








# ಮನುವಿಕಾಸ ಸಂಸ್ಥೆ ಹಾಗೂ ಸಿ.ಎಮ್.ಎಸ್. ಫೌಂಡೇಶನ್ ಸಹಯೋಗದಲ್ಲಿ ಶಿಕ್ಷಣ ಮತ್ತು ಗ್ರಾಮೀಣಾಭಿವೃದ್ಧಿ ಯೋಜನೆಗಳ ಅನುಷ್ಠಾನ

ಗ್ರಾಮೀಣ ಸಮುದಾಯಕ್ಕಾಗಿ ಸದಾ ನಾವೀನ್ಯತೆಯುಳ್ಳ ಪ್ರಗತಿಪರ ಕಾರ್ಯಚಟುವಟಿಕೆಗಳನ್ನು ರೂಪಿಸಿ ಅದನ್ನು ಸಕ್ರಿಯವಾಗಿ ಮನುವಿಕಾಸ ಸಂಸ್ಥೆ ಕಳೆದ 23 ವರ್ಷಗಳಿಂದ ಅನುಷ್ಠಾನಗೊಳಿಸುತ್ತಿದೆ. ಗ್ರಾಮೀಣ ಮಟ್ಟದಲ್ಲಿ ನೈಸರ್ಗಿಕ ಸಂಪನ್ಮೂಲಗಳ ಸಮರ್ಪಕ ಉಪಯೋಗ ಮತ್ತು ಜಾಗೃತಿಯನ್ನು ನಿರಂತರವಾಗಿ ಮೂಡಿಸುತ್ತಿದೆ.

ಸಂಸ್ಥೆಯು ಸಿಎಮ್‌ಎಸ್ ಇನ್‌ಫೋ ಸಿಸ್ಟಮ್ಸ್, ಮುಂಬೈ ಇವರ ಸಹಯೋಗದೊಂದಿಗೆ ಈಗಾಗಲೇ ಉತ್ತರಕನ್ನಡ, ಧಾರವಾಡ ಮತ್ತು ಹಾವೇರಿ ಜಿಲ್ಲೆಗಳಲ್ಲಿ ಅವಸಾನದ ಅಂಚಿನಲ್ಲಿರುವ 26 ಮಧ್ಯಮ ಮತ್ತು ಬೃಹತ್‌ಗಾತ್ರದ ಕೆರೆಗಳನ್ನು ಪುನರುಜ್ಜೀವನಗೊಳಿಸಿದೆ. ಇದರ ಮುಂದುವರೆದ ಭಾಗವಾಗಿ ಮಹಿಳೆಯರಲ್ಲಿ ಸುಸ್ಥಿರ ಕೃಷಿಯ ಪರಿಕಲ್ಪನೆಯನ್ನು ಜಾಗೃತಗೊಳಿಸಲು ಮತ್ತು ಅವರ ಕುಟುಂಬಗಳ ಆರ್ಥಿಕ ಜೀವನಮಟ್ಟವನ್ನು ಸುಧಾರಿಸಲು ಉತ್ತರಕನ್ನಡ ಜಿಲ್ಲೆಯ ಬನವಾಸಿ ಭಾಗದ ಆಯ್ದ 20 ಹಳ್ಳಿಗಳಲ್ಲಿ ಗ್ರಾಮೀಣಾಭಿವೃದ್ಧಿಗೆ ಸಂಬಂಧಿಸಿದ ಹಲವಾರು ಯೋಜನೆಗಳನ್ನು ಜಾರಿಗೆ ತಂದಿದೆ

### 1. ಗ್ರಾಮೀಣ ರೈತ ಮಹಿಳೆಯರಿಗೆ ಸುಸ್ಥಿರ ಕೃಷಿ ತರಬೇತಿ ಮತ್ತು ಸಾವಯವಗೊಬ್ಬರ, ಹಣ್ಣಿನ ಗಿಡಗಳು ಮತ್ತು ಬೀಜಗಳ ವಿತರಣೆ

ಸಂಸ್ಥೆಯು ಈಗಾಗಲೇ ಕಿರವತ್ತಿ, ಕೊರ್ಲಕಟ್ಟಾ ಮತ್ತು ಬನವಾಸಿಗಳಲ್ಲಿ ಸುಸ್ಥಿರ ಕೃಷಿ ಕಾರ್ಯಾಗಾರಗಳನ್ನು ಆಯೋಜಿಸಿ ಆಯ್ದ174 ಗ್ರಾಮೀಣ ಮಹಿಳೆಯರಿಗೆ ತರಬೇತಿಯನ್ನು ನೀಡಿದೆ. ಅದರಲ್ಲಿ 125 ಗ್ರಾಮಿಣ ಮಹಿಳೆಯರಿಗೆ ಸಾವಯವಗೊಬ್ಬರ, 9 ಬಗೆಯ ಹಣ್ಣಿನಗಿಡಗಳು ಮತ್ತು 15 ಬಗೆಯ ಸಾವಯುವ ತರಕಾರಿ/ ಸೊಪ್ಪಿನ ಬೀಜಗಳನ್ನು ವಿತರಿಸಿದೆ.

### 2. ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗಾಗಿ ಸಮಗ್ರ ಶಿಕ್ಷಣ ಮತ್ತು ಸಂವಹನ ಅಭಿವೃದ್ಧಿ ಕೇಂದ್ರದ ಪ್ರಾರಂಭ

ಸಂಸ್ಥೆಯು ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗಾಗಿ ಅದರಲ್ಲೂ 5,6,7,8ನೇ ತರಗತಿಯ ವಿದ್ಯಾರ್ಥಿಗಳಿಗಾಗಿ ಬೀಳೂರು, ಮಾಳಂಜಿ, ಅಂಡಗಿ, ಕಿರವತ್ತಿ, ರಂಗಾಪುರ, ಗುಡ್ನಾಪುರ, ಬಿಸಲಕೊಪ್ಪ, ಭಾಶಿ, ಅಜ್ಜರಣಿ ಈ 10 ಗ್ರಾಮಗಳಲ್ಲಿ ಸಮಗ್ರ ಶಿಕ್ಷಣ ಮತ್ತು ಸಂವಹನ ಅಭಿವೃದ್ಧಿ ಕೇಂದ್ರವನ್ನು ಪ್ರಾರಂಭಿಸಿದೆ. ಮಕ್ಕಳಿಗೆ ಇಲ್ಲಿ ಶಾಲಾ ಅವಧಿಯ ನಂತರದಲ್ಲಿ ಅವರ ಕಲಿಕೆಗೆ ಪೂರಕವಾಗಿ ಇಂಗ್ಲೀಷ, ಗಣಿತ, ವಿಜ್ಞಾನ ಮತ್ತು ಸಂವಹನಕ್ಕೆ ಸಂಬಂಧಿಸಿದ ಕೌಶಲ್ಯಾಧಾರಿತ ಚಟುವಟಿಕೆಗಳನ್ನು ನಡೆಸಲಾಗುತ್ತಿದೆ. ಈ ಯೋಜನೆಯು ಸುಮಾರು ಒಂಭತ್ತು ತಿಂಗಳುಗಳ ಕಾಲ ನಡೆಯಲಿದ್ದು, ಈ ಚಟುವಟಿಕೆಗೆ ಪ್ರತ್ಯೇಕವಾಗಿ ನುರಿತ ಶಿಕ್ಷಕರನ್ನು ಮತ್ತು ಆಯ್ದ ಮಕ್ಕಳಿಗೆ ಕಲಿಕೋಪಕರಣಗಳಿಗೆ ತಗಲುವ ವೆಚ್ಚವನ್ನು ಮನುವಿಕಾಸ ಸಂಸ್ಥೆಯಿಂದಲೇ ಭರಿಸಲಾಗುತ್ತಿದೆ. 300 ಗ್ರಾಮೀಣ ವಿದ್ಯಾರ್ಥಿಗಳು ಈ ಕೇಂದ್ರಗಳಲ್ಲಿ ಅಧ್ಯಯನ ನಡೆಸುತ್ತಿದ್ದಾರೆ.

### 3. ಗ್ರಾಮೀಣ ಭಾಗದ ಮಹಿಳೆಯರಿಗಾಗಿ ಕೇಟರಿಂಗ್ ಮತ್ತು ಸುಧಾರಿತ ಹೊಲಿಗೆ ತರಬೇತಿ

ಗ್ರಾಮೀಣ ಮಹಿಳೆಯರು ಪರ್ಯಾಯ ಜೀವನೋಪಾಯ ನಿರ್ವಹಣೆಯ ಮೂಲಕ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸುವದರ ಜೊತೆಗೆ ಅವರ ಕೌಶಲ್ಯಾಭಿವೃದ್ಧಿಯನ್ನು ವೃದ್ದಿಸುವ ನಿಟ್ಟಿನಲ್ಲಿ ಸಂಸ್ಥೆಯು ಕೇಟರಿಂಗ್ ಮತ್ತು ಸುಧಾರಿತ ಹೊಲಿಗೆ ತರಬೇತಿಯನ್ನು ಆಯೋಜಿಸುತ್ತಿದೆ. ಈಗಾಗಲೇ ಮಧುರವಳ್ಳಿ ಮತ್ತು ರಂಗಾಪುರ

ಗ್ರಾಮಗಳಲ್ಲಿ ಕೇಟರಿಂಗ್ ತರಬೇತಿ ಮತ್ತು ರಾಮಾಪುರದಲ್ಲಿ ಸುಧಾರಿತ ಹೊಲಿಗೆ ತರಬೇತಿಗಳು ಪ್ರಗತಿಯಲ್ಲಿವೆ. ಒಟ್ಟಾರೆಯಾಗಿ 155 ಆಯ್ದ ಗ್ರಾಮೀಣ ಮಹಿಳೆಯರಿಗೆ ಕೌಶಲ್ಯ ತರಬೇತಿಗಳನ್ನು ನೀಡುವ ಉದ್ದೇಶವನ್ನು ಸಂಸ್ಥೆ ಹೊಂದಿದೆ.

### 4. ಸ್ವ-ಸಹಾಯ ಸಂಘಗಳ ಮಹಿಳೆಯರಿಗಾಗಿ ಡಿಜಿಟಲ್ ಸಾಕ್ಷರತಾ ತರಬೇತಿ

ಮಹಿಳಾ ಸ್ವ- ಸಹಾಯ ಸಂಘಗಳಲ್ಲಿನ ಹಣದ ವ್ಯವಹಾರದ ಪಾರದರ್ಶಕತೆಯನ್ನು ಗಮನದಲ್ಲಿರಿಸಿಕೊಂಡು ಸಂಸ್ಥೆಯು ಸ್ವ-ಸಹಾಯ ಸಂಘಗಳ ಮಹಿಳೆಯರಿಗಾಗಿ ಡಿಜಿಟಲ್ ಸಾಕ್ಷರತಾ ತರಬೇತಿಗಳನ್ನು ಆಯೋಜಿಸುತ್ತಿದೆ, ಸುಲಲಿತ ಬ್ಯಾಂಕ್ ವ್ಯವಹಾರಗಳು, ಮೊಬೈಲ್‌ಆಪ್‌ಗಳ ಬಳಕೆ ಮತ್ತು ಡಿಜಿಟಲ್ ತಂತ್ರಜ್ಞಾನಗಳ ಬಗೆಗೆ ಜಾಗೃತಿ ಮೂಡಿಸುವ ಕೆಲಸವನ್ನು ಮಾಡಲಾಗುತ್ತಿದೆ. 120 ಸ್ವ- ಸಹಾಯ ಸಂಘಗಳ 1200 ಗ್ರಾಮೀಣ ಮಹಿಳೆಯರಿಗೆ ಈ ತರಬೇತಿಯನ್ನು ಮುಂಬರುವ ದಿನಗಳಲ್ಲಿ ನೀಡಲಾಗುತ್ತದೆ.

### 5. ಕೃಷಿ ಹೊಂಡಗಳ ನಿರ್ಮಾಣ

ಅತಿ ಸಣ್ಣ ಮತ್ತು ಮಧ್ಯಮ ವರ್ಗದ ರೈತಾಪಿ ಸಮುದಾಯದ ಬೇಸಿಗೆಯ ನೀರಿನ ಬವಣೆಯನ್ನು ತಪ್ಪಿಸಲು ಮತ್ತು ಅವರ ಆರ್ಥಿಕ ಜೀವನ ಮಟ್ಟವನ್ನು ಸುಧಾರಿಸಲು ಸಂಸ್ಥೆಯು ಕೃಷಿ ಹೊಂಡಗಳ ನಿರ್ಮಾಣ ಮಾಡಿದೆ ಆಯ್ದ 10 ಫಲಾನುಭವಿಗಳಿಗೆ ಈ ಯೋಜನೆಯನ್ನು ದೊರಕಿಸಿಕೊಟ್ಟಿದ್ದು, ಇದರಿಂದಾಗಿ ರೈತರಿಗೆ ಹೆಚ್ಚುವರಿ ಬೆಳೆ ಬೆಳೆಯಲು ಅನುಕೂಲವಾಗಿದೆ.

### 6, ಗ್ರಾಮೀಣ ಮಹಿಳೆಯರಿಗೆ ಕೋಳಿಮರಿಗಳು ಮತ್ತು ಕೋಳಿ ಗೂಡುಗಳ ವಿತರಣೆ

ಮನೆಯಲ್ಲಿದ್ದುಕೊಂಡೇ ಏನಾದರು ಮಾಡಬೇಕು ಎನ್ನುವ ಉತ್ಸಾಹಿ ಮಹಿಳೆಯರಿಗಾಗಿ ಸಂಸ್ಥೆಯು ಅತ್ಯಂತ ಕಡಿಮೆ ಸಮುದಾಯ ವಂತಿಕೆ ಸಂಗ್ರಹಣೆಯ ಮೂಲಕ ಕೋಳಿ ಮರಿಗಳು ಮತ್ತು ಕೋಳಿ ಗೂಡುಗಳನ್ನು ವಿತರಣೆ ಮಾಡುತ್ತಿದೆ. ಆಯ್ದ 30 ಕುಟುಂಬಗಳಿಗೆ ತಲಾ 10 ಕೋಳಿ ಮರಿಗಳು ಮತ್ತು ಸುಸಜ್ಜಿತವಾದ ಗೂಡನ್ನು ವಿತರಣೆ ಮಾಡುವ ಯೋಜನೆಯನ್ನು ಸಂಸ್ಥೆ ಹೊಂದಿದೆ.

ಈ ಮೇಲಿನ ಎಲ್ಲ ಯೋಜನೆಗಳು ಸಕಾಲದಲ್ಲಿ ನಡೆಯಲು, ಪಾರದರ್ಶಕತೆಯಿಂದ ಕೂಡಿರಲು ಮತ್ತು ಸರಿಯಾದ ಫಲಾನುಭವಿಗಳ ಆಯ್ಕೆಗೆ ಸಮುದಾಯದ ಮಟ್ಟದಲ್ಲಿ ಸಮುದಾಯ ಸಂಪನ್ಮೂಲ ವ್ಯಕ್ತಿಗಳನ್ನು ಸಂಸ್ಥೆ ನೇಮಕ ಮಾಡಿದೆ. ಕಾಲ ಕಾಲಕ್ಕೆ ಯೋಜನೆಯ ಗುಣಮಟ್ಟವನ್ನು ಪರೀಕ್ಷಿಸಲು ಮೌಲ್ಯಮಾಪನವನ್ನು ನುರಿತ ವಿಷಯ ತಜ್ಞರತಂಡ ಕೈಗೊಳ್ಳುತ್ತದೆ. ಒಟ್ಟಾರೆಯಾಗಿ ಗ್ರಾಮಗಳ ಅಭ್ಯದಯದಿಂದ ಮಾತ್ರ ಸಮಾಜ ಮತ್ತು ದೇಶದ ಸರ್ವಾಂಗೀಣ ಅಭಿವೃದ್ಧಿ ಸಾಧ್ಯ ಎನ್ನುವ ದೃಢವಾದ ನಂಬಿಕೆಯನ್ನು ಸಂಸ್ಥೆ ಮನಗಂಡಿದೆ.






# ಮನುವಿಕಾಸ ಸಂಸ್ಥೆಯ ಪರೋಪಕಾರ ಸೇವೆ ಅವಿಸ್ಮರಣೀಯ : ಶಾಸಕ ಯು.ಬಿ. ಬಣಕಾರ ಅಭಿಮತ

ಮನುವಿಕಾಸ ಸಂಸ್ಥೆ ಹಾಗೂ ಹೆಚ್.ಡಿ.ಬಿ.ಫೈನಾನ್ಶಿಯಲ್ ಸರ್ವಿಸಸ್ ಇವರ ಸಹಯೋಗದೊಂದಿಗೆ ಹಾವೇರಿ ಜಿಲ್ಲೆಯ ಹಿರೇಕೆರೂರು ತಾಲೂಕಿನ ಸಿ.ಇ.ಎಸ್. ವಿದ್ಯಾಸಂಸ್ಥೆಯ ಸರ್ವಜ್ಞ ಸಾಂಸ್ಕೃತಿಕ ಭವನದಲ್ಲಿ ದಿನಾಂಕ 12.05.2025 ಸೋಮವಾರದಂದು ರೈತರ 'ಕೆರೆ ಸಮಾವೇಶ' ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಹಿರೇಕೆರೂರು ವಿಧಾನಸಭಾ ಕ್ಷೇತ್ರದ ಶಾಸಕರಾದ ಯು.ಬಿ.ಬಣಕಾರ್ ರವರು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಮನುಷ್ಯನಿಗೆ ಕೃತಜ್ಞತೆ ಸ್ಮರಣೆ ಎಂಬುದು ಅತಿ ಮುಖ್ಯವಾಗಿದ್ದು ಯಾವುದೇ ಕ್ಷೇತ್ರದಲ್ಲಿ ನಮಗೆ ಮಾಡಿದ ಉಪಕಾರವನ್ನು ಸ್ಮರಿಸುವ ಮೂಲಕ ಅವರಿಗೆ ಕೃತಜ್ಞತೆ ಸಲ್ಲಿಸಬೇಕಾಗಿರುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದು ಹೇಳಿದರು. ಮನುವಿಕಾಸ ಸಂಸ್ಥೆಯು ರೈತರಿಗೆ ಕೃಷಿ ಬದುಕಿಗೆ ಸಹಾಯ ಮಾಡಲು ಕೆರೆಗಳನ್ನು ಹೂಳೆತ್ತಿ ಅಭಿವೃದ್ಧಿಪಡಿಸುವ ಕಾರ್ಯಕ್ಕೆ ಮುಂದಾಗಿದೆ, ಈ ಯೋಜನೆಯು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ನಮ್ಮ ತಾಲೂಕಿನಲ್ಲಿ ಅನುಷ್ಠಾನಗೊಳ್ಳಲಿ, ನಮ್ಮ ಭಾಗದ ರೈತರು ಈ ಯೋಜನೆಯ ಪ್ರಯೋಜನ ಪಡೆದುಕೊಳ್ಳಿ ಎಂದರು.

ಸಂಸ್ಥೆಯು ಕೆರೆಗಳನ್ನು ಅತಿ ಕಡಿಮೆ ವೆಚ್ಚದಲ್ಲಿ ಅತ್ಯಂತ ಅಚ್ಚುಕಟ್ಟಾಗಿ ಅಭಿವೃದ್ಧಿಗೊಳಿಸಿ ಗ್ರಾಮಸ್ಥರಿಗೆ ದನ ಕರುಗಳಿಗೆ ಹಾಗೂ ರೈತರಿಗೆ ರೈತಾಪಿ ಕೆಲಸಕ್ಕೆ ಅನುಕೂಲ ಕಲ್ಪಿಸುತ್ತಿರುವುದು ಶ್ಲಾಘನೀಯ ಎಂದರು. ಮನುವಿಕಾಸ ಸಂಸ್ಥೆಯು ಕೆರೆಗಳನ್ನು ಅಭಿವೃದ್ಧಿ ಪಡಿಸಿ ಜಲ ಸಂರಕ್ಷಣೆ ಕಾರ್ಯ ಮಾಡುವುದರ ಜೊತೆಯಲ್ಲಿ ಮಹಿಳೆಯರಿಗೆ ಸ್ವ ಉದ್ಯೋಗದ ತರಬೇತಿಗಳನ್ನು ನೀಡುವ ಮೂಲಕ ಮಹಿಳಾ ಸಬಲೀಕರಣದ ಯೋಜನೆಯನ್ನು ಸಮಾಜಕ್ಕೆ ನೀಡುತ್ತಿದೆ. ಇದರ ಸದುಪಯೋಗವನ್ನು ತಾವೆಲ್ಲರೂ ಪಡೆದುಕೊಳ್ಳಬೇಕು, ಅದರ ಜೊತೆಯಲ್ಲಿ ಸಂಸ್ಥೆಗೆ ನಾವು ನಮ್ಮ ಕೈಲಾದ ಸಹಾಯ ಸಹಕಾರವನ್ನು ಕೂಡ ನೀಡಬೇಕು ಎಂದು ಕರೆ ನೀಡಿದರು. ಈ ಕಾರ್ಯಕ್ರಮದಲ್ಲಿ ರಟ್ಟಿಹಳ್ಳಿ ತಾಲೂಕಿನ ಕಬ್ಬಿಣ ಕಂತಿ ಮಠದ ಶ್ರೀ ಶಿವಲಿಂಗ ಶಿವಾಚಾರ್ಯ ಸ್ವಾಮೀಜಿ ಸಾನಿಧ್ಯವನ್ನು ವಹಿಸಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಾಜಿ ಶಾಸಕರಾದ ಬಿ ಹೆಚ್ ಬನ್ನಿಕೊಡ ವಹಿಸಿದ್ದರು. ಕಾರ್ಯಕ್ರಮಕ್ಕೆ ಅತಿಥಿಗಳಾಗಿ ಸಿ.ಇ.ಎಸ್ ವಿದ್ಯಾಸಂಸ್ಥೆಯ ಗೌರವಾಧ್ಯಕ್ಷ ಎಸ್ ಎಸ್ ಪಾಟೀಲ್ ರೈತ ಸಂಘದ ಅಧ್ಯಕ್ಷ ರಾಮಣ್ಣ ಕೆಂಚಳ್ಳೆರ, ಕರ್ನಾಟಕದ ರೈತ ಸಂಘದ ಅಧ್ಯಕ್ಷ ರಾಜಶೇಖರ್ ಶಿವಯೋಗಿ ಮಕರಿ ಹಾಗೂ 400 ಕ್ಕೂ ಹೆಚ್ಚು ವಿವಿಧ ಗ್ರಾಮಗಳ ರೈತ ಬಾಂಧವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.










| ಕ್ರ.ಸಂ. | ಕೆರೆ ಹೆಸರು | ಊರು | ಸರ್ವೆ ನಂ | ವಿಸ್ತೀರ್ಣ | ಗ್ರಾ ಪಂ | ತಾಲೂಕು | ಜಿಲ್ಲೆ | ಜಿ.ಪಿ.ಎಸ್. |
|---|---|---|---|---|---|---|---|---|
| 1 | ಲಾಗಪಾಡ ಅಗದಾ ಬಿಳು ಕೆರೆ | ಚನ್ನಳ್ಳಿ ತಾಂಡಾ | 89 | 05.33.00 | ಚನ್ನಳ್ಳಿ | ಹೀರೆಕೆರೂರು | ಹಾವೇರಿ | 14.4326833 75.392365 |
| 2 | ಬಳ್ಳಿಗಟ್ಟಿ ಕೆರೆ | ಆಸ್ತಿಕಟ್ಟೆ | 60 | 07.39.00 | ಬೀರವಳ್ಳಿ | ಕಲಘಟಗಿ | ಧಾರವಾಡ | 15.09763117 75.0493633 |
| 3 | ವಯ್ಯನಕಟ್ಟೆಕೆರೆ | ಕೊಪ್ಪಗೊಂಡನಕೊಪ್ಪ | 30 | 04.32.00 | ತಿಳವಳ್ಳಿ | ಬ್ಯಾಡಗಿ | ಹಾವೇರಿ | 14.6140417 75.24669 |
| 4 | ದೇವತಿಕಟ್ಟೆಕೆರೆ | ಹೀರೆಅಣಜಿ | 89 | 03.20.00 | ಹೀರೆಅಣಜಿ | ಬ್ಯಾಡಗಿ | ಹಾವೇರಿ | 14.6104967 75.33437833 |
| 5 | ಗುಡ್ಡದ ದೂಪದ ಕೆರೆ | ನಂದಿಕಟ್ಟಾ | 76 | 11.05.00 | ನಂದಿಕಟ್ಟಾ | ಮುಂಡಗೋಡ | ಉತ್ತರಕನ್ನಡ | 15.0216563 74.9832698 |
| 6 | ಕಳ್ಳನಕಟ್ಟಿ ಕೆರೆ | ಆರಿಕಟ್ಟಿ | 185 | 08.14.00 | ಬೇಟೆಕೆರೂರು | ಹೀರೆಕೆರೂರು | ಹಾವೇರಿ | 14.457421 75.389006 |
| 7 | ಹೀರೆಕಟ್ಟಿ | ಯತ್ತಿನಳ್ಳಿ ಎಮ್.ಕೆ. | 78 | 08.05.00 | ಯತ್ತಿನಳ್ಳಿ ಎಮ್.ಕೆ. | ಹೀರೆಕೆರೂರು | ಹಾವೇರಿ | 14.528533 75.390516 |
| 8 | ಹೀರೆಕಟ್ಟಿ | ಬೆಲವಂತರ | 79 | 13.37.00 | ಬೆಲವಂತರ | ಕಲಘಟಗಿ | ಧಾರವಾಡ | 15.141034 74.983577 |
| 9 | ಅಗಸೆಬಾಗಿಲು ಕೆರೆ (ತುಂಬುಹೊಂಡ) | ತಾವರೆಗೊಪ್ಪ | 25 | 04.12.00 | ಮಾವಲಿ | ಸೊರಬ | ಶಿವಮೊಗ್ಗ | 14.355835 75.16990667 |
| 10 | ತೆಲವಡ್ಡುಕೆರೆ | ಡಮ್ಮಳ್ಳಿ | 91 | 06.11.00 | ಬೇಟೆಕೆರೂರು | ಹೀರೆಕೆರೂರು | ಹಾವೇರಿ | 14.457493 75.389086 |
| 11 | ಹೊಲಗಟ್ಟಿ ಕೆರೆ | ಅರಳೇಶ್ವರ | 78 | 19.33.00 | ಅರಳೇಶ್ವರ | ಹಾನಗಲ್ | ಹಾವೇರಿ | 14.7867967 75.179411 |
| 12 | ದೊಡ್ಡಕೆರೆ | ಚನ್ನಾಪುರ | 21 | 12.39.00 | ಬಾಳಂಬೀಡ | ಹಾನಗಲ್ | ಹಾವೇರಿ | 14.778675 75.22477667 |
| 13 | ಚಾಳಿಕಟ್ಟಿ ಕೆರೆ | ಕೊಂಡೋಜಿ | 177 | 02.00.00 | ಶ್ಯಾಡಗುಪ್ಪಿ | ಹಾನಗಲ | ಹಾವೇರಿ | 14.68616833 75.161935 |
| 14 | ನಿಂಗಯ್ಯನಕಟ್ಟಿ ಕೆರೆ | ಕಿರವಾಡಿ | 39 | 05.37.00 | ಕಿರವಾಡಿ | ಹಾನಗಲ್ | ಹಾವೇರಿ | 14.60727667 75.218275 |
| 15 | ತಳವಾರ ಕೆರೆ | ಚನ್ನಳ್ಳಿ ಪ್ಲಾಟ್ | 43 | 03.36.00 | ಚನ್ನಳ್ಳಿ | ಹೀರೆಕೆರೂರು | ಹಾವೇರಿ | 14.41315333 75.38699 |
| 16 | ಕೊರಪ್ಪನ ಕೆರೆ | ತತ್ತೂರು | 124 | 02.24.00 | ತತ್ತೂರು | ಸೊರಬ | ಶಿವಮೊಗ್ಗ | 14.49375167 75.22536167 |
| 17 | ದೊಡ್ಡಕೆರೆ | ಹನುಮನಕೊಪ್ಪ | 164 | 26.03.00 | ಹೀರೂರು | ಹಾನಗಲ್ | ಹಾವೇರಿ | 14.70554667 75.10007167 |
| 18 | ಹಳೆತುಮುಡ ಕೆರೆ | ಕಾಲ್ವೇಯಲ್ಲಾಪುರ | 84 | 07.20.00 | ಬಾಳಂಬೀಡ | ಹಾನಗಲ್ | ಹಾವೇರಿ | 14.77971833 75.19556167 |
| 19 | ಸಿದ್ದಪ್ಪನಕಟ್ಟೆ ಕೆರೆ | ಹೊಸೂರು | 40 | 03.07.00 | ಹೊಸೂರು | ಶಿಗ್ಗಾಂವ್ | ಹಾವೇರಿ | 14.990425 75.135476 |
| 20 | ಅಡ್ಡೆರಿ ಕೆರೆ | ಕಳಗೊಂಡ | 89 | 08.30.00 | ಅಬಲೂರು | ಹೀರೆಕೆರೂರು | ಹಾವೇರಿ | 14.48947167 75.42699333 |
| 21 | ಅರಳಿಕಟ್ಟಿ ಕೆರೆ | ಚಿಕ್ಕಬಾಸೂರು | 122 | 04.33.00 | ಚಿಕ್ಕಬಾಸೂರು | ಬ್ಯಾಡಗಿ | ಹಾವೇರಿ | 14.63431823 75.30352451 |
| 22 | ಚಿಕ್ಕನಕಟ್ಟೆ ಕೆರೆ | ಹೊತನಹಳ್ಳಿ | 89 | 15.27.00 | ಅರಳೇಶ್ವರ | ಹಾನಗಲ್ | ಹಾವೇರಿ | 14.76633833 75.1824667 |
| 23 | ಬಳ್ಳಿಗಟ್ಟಿ ಕೆರೆ | ಬಾಚಣಕಿ | 70 | 06.34.00 | ಬಾಚಣಕಿ | ಮುಂಡಗೊಡ | ಉತ್ತರಕನ್ನಡ | 15.00516833 75.057825 |

| ಕ್ರ.ಸಂ. | ಕೆರೆ ಹೆಸರು | ಊರು | ಸರ್ವೆ ನಂ | ವಿಸ್ತೀರ್ಣ | ಗ್ರಾ ಪಂ | ತಾಲೂಕು | ಜಿಲ್ಲೆ | ಜಿ.ಪಿ.ಎಸ್. |
|---|---|---|---|---|---|---|---|---|
| 24 | ವಡ್ಡರಕಟ್ಟಿಕ ೆರೆ | ಮಾಳಾಪುರ | 19 | 44.02.00 | ಕೆಲವರಕೊಪ್ಪ | ಹಾನಗಲ್ | ಹಾವೇರಿ | 14.64569<br>75.255646 |
| 25 | ಹೆಗ್ಗನಕೆರೆ | ಹೀರೆಹೊನ್ನಳ್ಳಿ | 227 | 08.04.00 | ಹೀರೆಹೊನ್ನಳ್ಳಿ | ಕಲಘಟಗಿ | ಧಾರವಾಡ | 15.21847667<br>75.01072 |
| 26 | ಸಚ್ಚೊಲನವಡ್ಡಿನ ಕೆರೆ | ಕಡೆನಂದಿಹಳ್ಳಿ | 161 | 15.08.00 | ಸುಣ್ಣದಕೊಪ್ಪ | ಶಿಕಾರಿಪುರ | ಶಿವಮೊಗ್ಗ | 14.4206333<br>75.37559333 |
| 27 | ಕಾಲಕಟ್ಟಿ ಕೆರೆ | ಕೊಂಡೋಜಿ | 7 | 02.39.00 | ಶ್ಯಾಡಗುಪ್ಪಿ | ಹಾನಗಲ | ಹಾವೇರಿ | 14.688899<br>75.165056 |
| 28 | ದೊಡ್ಡಕೆರೆ | ಕಿರವತ್ತಿ | 83 | 29.02.00 | ಅಂಡಗಿ | ಶಿರಸಿ | ಉತ್ತರ ಕನ್ನಡ | 14.64458<br>75.02405333 |
| 29 | ಭರಮಗಟ್ಟಿ ಕೆರೆ | ಚನ್ನಳ್ಳಿ ತಾಂಡಾ | 46 | 06.20.00 | ಚನ್ನಳ್ಳಿ | ಹೀರೆಕೆರೂರು | ಹಾವೇರಿ | 15.03765<br>75.09485333 |
| 30 | ದೊಡ್ಡಕೆರೆ | ಮಾತಾಪುರ | 171 | 05.13.00 | ಕುನ್ನೂರು | ಶಿಗ್ಗಾಂವ್ | ಹಾವೇರಿ | 15.03765<br>75.09485333 |
| 31 | ದೊಡ್ಡಕೆರೆ | ಕಾಲ್ವೇಯಲ್ಲಾಪುರ | 56 | 26.04.00 | ಬಾಳಂಬೀಡ | ಹಾನಗಲ | ಹಾವೇರಿ | 14.775697<br>75.193275 |
| 32 | ಸರಕಾರಿ ಕೆರೆ | ಹನುಮಾಪುರ | 07 | 07.24.00 | ಕಲ್ಲಾಪುರ | ಹಾನಗಲ | ಹಾವೇರಿ | 14.70255833<br>75.16267667 |
| 33 | ಬಾಳೆಹಳ್ಳಿ ಕೆರೆ | ಹನುಮನಕೊಪ್ಪ | 84 | 31.09.00 | ಹೀರೂರು | ಹಾನಗಲ | ಹಾವೇರಿ | 14.70747833<br>75.07733167 |
| 34 | ಸರಕಾರಿವಡ್ಡು | ಡಮ್ಮಳ್ಳಿ | 184 | 06.10.00 | ಬೇಟೆಕೆರೂರು | ಹೀರೆಕೆರೂರು | ಹಾವೇರಿ | 14.5042<br>75.34172 |
| 35 | ಗೊಲ್ಲಗೌಡರ ಕೆರೆ | ಹುಣಸಿಕಟ್ಟಿ | 114 | 06.30.00 | ಮುಕ್ಕಲ್ಲ | ಕಲಘಟಗಿ | ಧಾರವಾಡ | 15.13073167<br>75.0280683 |
| 36 | ಬಿದರಕಟ್ಟಿ ಕೆರೆ | ಬುರಡಿಕಟ್ಟಿ | 134 | 12.15.00 | ಬುರಡಿಕಟ್ಟಿ | ಹೀರೆಕೆರೂರು | ಹಾವೇರಿ | 14.467163<br>75.349586 |



# ಉಳುವಾಯೋಗಿ ಉಳೋದು ಬಿಟ್ರೇ ಉಳಿಯೋದು ಯಾರು..........?



ನಾಗರಿಕತೆ ಬೆಳೆದಂತೆಲ್ಲ ಮನುಷ್ಯನ ಆಸೆಗಳು, ದುರಾಸೆಗಳು ಬೇಡಿಕೆಗಳು ಹೆಚ್ಚುತ್ತಲೆ ಇವೆ. ಅದರಲ್ಲೂ ಮನುಷ್ಯನ ನೀರಿನ ಬಳಕೆ ಮತ್ತು ನೀರನ್ನು ಅವ್ಯಾಹತವಾಗಿ ಅನುಪಯುಕ್ತವನ್ನಾಗಿ ಮಾಡುವುದು ಇಂದಿನ ಪರಿಸರದ ಅಸಮತೋಲನಕ್ಕೆ ಕಾರಣವಾಗುತ್ತಿದೆ. ಒಂದು ಕಾಲದಲ್ಲಿ ಸಮುದಾಯದ ಆಸ್ತಿಯಾಗಿದ್ದ ನೀರು ಎನ್ನುವ ಸಂಪನ್ಮೂಲ ಅತಿಯಾದ ಬೋರ್ವೆಲ್ ಕೊರೆತದಿಂದ ಸ್ವಂತ ಆಸ್ತಿ ಎಂದು ಮನುಷ್ಯ ಭ್ರಮೆಪಟ್ಟಿದ್ದಾನೆ. ಇತ್ತೀಚಿಗೆ ಬೋರ್ವೆಲ್ ನೀರಿನ ಕೊರತೆ ಮತ್ತು ಕೆಲವು ಬೋರ್‌ವೆಲ್‌ಗಳು ಕೆಲವು ವರ್ಷ ಉತ್ತಮ ಇಳುವರಿ ನೀಡಿ ನಂತರ ಬತ್ತುತ್ತಿರುವುದರಿಂದ ರೈತರು ಬೋರ್ವೆಲ್ ಮೇಲಿಟ್ಟ ನಂಬಿಕೆ ಹುಸಿ ಆಗುತ್ತಿದೆ.

ಅಸಮರ್ಪಕ ಮತ್ತು ಅನಿಯಮಿತವಾದ ಮಳೆಯಿಂದ ನೀರಿನ ಹಾಹಾಕಾರ ಹೆಚ್ಚುತ್ತಿದೆ. ಕೆಲವು ಕಡೆ ಬರಗಾಲ ಇನ್ನು ಕೆಲವು ಕಡೆ ನೆರೆಹಾವಳಿ ಕಂಡುಬರುತ್ತಿವೆ. ಇವೆಲ್ಲವನ್ನು ಸರಿದೂಗಿಸುವುದು ಹೇಗೆ ಎನ್ನುವುದೇ ಇಂದಿನ ಜಮಾನದ ಪ್ರಶ್ನೆಯಾಗಿದೆ. ಈ ತಲೆಬಿಸಿಯೇ ಬೇಡವೆಂದು ಇಂದಿನ ಯುವ ಜನತೆ  ಕೃಷಿಯೇ ಬೇಡ ಎಂದು ನಗರಗಳಿಗೆ ವಲಸೆ ಹೋಗುತ್ತಿದ್ದಾರೆ.



'ದುಡಿಮೆಯ ನಂಬಿ ಬದುಕು ಅದರಲಿ ದೇವರ ಹುಡುಕು ಎಂದು ನಂಬಿರುವ' ಅನೇಕ ಹಿರಿಯ ಜೀವಗಳು ಇನ್ನೂ ಕೃಷಿಯಲ್ಲಿ ಆಸಕ್ತಿಯನ್ನು ಕಳೆದುಕೊಳ್ಳದೆ ದೇಶದ ಬೆನ್ನೆಲುಬಾಗಿ ಕೋಟ್ಯಾಂತರ ಜನರ ಹಸಿವನ್ನು ನೀಗಿಸಲು ಪ್ರಯತ್ನಿಸುತ್ತಿದ್ದಾರೆ. ಎಲ್ಲಿ ಸಮಸ್ಯೆಗಳಿವೆಯೋ ಅಲ್ಲಿ ಪರಿಹಾರ ಇದ್ದೇ ಇದೆ, ನೋಡುವ ನೋಟ ವಿಚಾರ ಮಾಡುವ ಮನಸ್ಸು ಮತ್ತು ಇತಿಹಾಸದಿಂದ ಕಲಿತ ಪಾಠಗಳು ನಮಗೆ ಅನೇಕ ಸಮಸ್ಯೆಗಳಿಗೆ ಹೊಸ ಹೊಸ ಆವಿಷ್ಕಾರಗಳ ಮೂಲಕ ಪರಿಹಾರವನ್ನು ಕಂಡುಕೊಳ್ಳುವಲ್ಲಿ ನೆರವಾಗುತ್ತವೆ. ಕೆರೆ ಕಟ್ಟೆಗಳು ಪುರಾತನ ಕಾಲದಿಂದ ರೈತರ ಮತ್ತು ನಗರ ನಾಗರಿಕರ ನೀರಿನ ಬವಣೆಯನ್ನು ಪೂರೈಸುತ್ತಾ ಬಂದಿದೆ. ಆದರೆ ಬೋರ್ವೆಲ್ ಸದ್ದಿಗೆ ಈ ಎಲ್ಲಾ ಕೆರೆ ಕಟ್ಟೆಗಳು ಮೌನವಾಗಿವೆ.

ಜನಸಾಮಾನ್ಯರು ಕೆರೆ ಕಟ್ಟೆಗಳನ್ನು ಅಲಕ್ಷಿಸಿದಂತೆ ಸಾವಿರಾರು ವರ್ಷಗಳಿಂದ ಯೌವನದಿಂದ ಕಂಗೊಳಿಸಿ ಲಕ್ಷಾಂತರ ಜನರಿಗೆ ನೀರು ಮತ್ತು ಕೃಷಿ ಕೈಗಾರಿಕೆಗಳಿಗೆ ಆಧಾರವಾಗಿದ್ದ ಕೆರೆಗಳಿಂದು ಕಸ–ಕಡ್ಡಿ, ಹೂಳು ತ್ಯಾಜ್ಯಗಳಿಂದ ತುಂಬಿ ವೃದ್ಧಾಪ್ಯವನ್ನು ತಲುಪಿವೆ.



ಭೂಮಿ ಆಳದ ಖನಿಜಗಳನ್ನು ತೆಗೆದು ಲೋಹಗಳನ್ನು ಪಡೆಯುವಂತೆ ಕೆರೆಯಲ್ಲಿಯ ಹೂಳು ಮಣ್ಣನ್ನು ತೆಗೆದು ಕೃಷಿಯಲ್ಲಿ ಬಂಗಾರವನ್ನೇ ಬೆಳೆಯುವ ಸಾಧ್ಯತೆಯನ್ನು ಉತ್ತರ ಕನ್ನಡ ಸೇರಿದಂತೆ ಧಾರವಾಡ, ಹಾವೇರಿ, ಶಿವಮೊಗ್ಗ ಜಿಲ್ಲೆಗಳ  ಜನರು ಮನುವಿಕಾಸ ಸಂಸ್ಥೆಯೊಂದಿಗೆ ಸೇರಿ ಅನೇಕ ಕೆರೆಗಳನ್ನು ಪುನರುಜ್ಜೀವನಗೊಳಿಸಿದ್ದಾರೆ. ತಮ್ಮದೇ ಸ್ವಂತ ಖರ್ಚಿನಲ್ಲಿ ಕೆರೆಯಲ್ಲಿ ಹೂಳಾಗಿ ಕುಳಿತಿದ್ದ ಮಣ್ಣನ್ನು ಜಮೀನುಗಳಿಗೆ ಸಾಗಿಸಿ ಶಿರಸಿ, ಮುಂಡಗೋಡ್, ಕಲಘಟಗಿ ಹಾನಗಲ್, ಶಿಗ್ಗಾವ್, ಹುಬ್ಬಳ್ಳಿ, ಸೊರಬ, ಹಿರೇಕೆರೂರಿನ ರೈತರು ಒಂದು ಇತಿಹಾಸವನ್ನೇ ಸೃಷ್ಟಿಸಿದ್ದಾರೆ. ಮಲೆನಾಡು ಸೀಮೆಗೂ ಕಾಫಿ ತೋಟಗಳಿಗೂ ಕೂಲಿಗೆ ಹೋಗಬೇಕಾದ ಅರೆ ಮಲೆನಾಡು ಪ್ರದೇಶದ ಜನರಿಂದು ತಮ್ಮ ಜೀವನವನ್ನು ತಮ್ಮ ಹಳ್ಳಿಗಳಲ್ಲಿಯೇ ಕಟ್ಟಿಕೊಳ್ಳುತ್ತಿದ್ದಾರೆ. ಕೇವಲ ವರ್ಷಕ್ಕೆ ಒಂದು ಬೆಳೆ ಬೆಳೆಯುತ್ತಿದ್ದ ರೈತರು ಕೆರೆ ಅಭಿವೃದ್ಧಿ ಆದ ನಂತರ ಎರಡು ಅಥವಾ ಮೂರು ಬೆಳೆಗಳನ್ನು ಬೆಳೆಯಲು ಪ್ರಾರಂಭಿಸಿದ್ದಾರೆ. ಸಾಮಾನ್ಯವಾಗಿ ಭತ್ತ, ಗೋವಿನ ಜೋಳ, ಹತ್ತಿ ಬೆಳೆಯುವ ರೈತರು ಇಂದು ತೋಟಗಾರಿಕಾ ಬೆಳೆಗಳನ್ನು ಒಪ್ಪಿಕೊಂಡು ಸೈಕಲ್‌ನಲ್ಲಿ ಓಡಾಡುವ ರೈತರು ಕಾರನ್ನು ಹೊಂದಿದ್ದಾರೆ.

ರೈತರ ಸಹಭಾಗಿತ್ವದಲ್ಲಿ ಕೆರೆಗಳನ್ನು ಅಭಿವೃದ್ಧಿಪಡಿಸುತ್ತಿರುವ ಮನುವಿಕಾಸ ಸಂಸ್ಥೆ ಅನೇಕ ದಾನಿ ಸಂಸ್ಥೆಗಳ ಸಹಯೋಗದಲ್ಲಿ ಉತ್ತರ ಕನ್ನಡ, ಹಾವೇರಿ, ಶಿವಮೊಗ್ಗ ಮತ್ತು ಧಾರವಾಡ ಜಿಲ್ಲೆಗಳಲ್ಲಿ 315 ಕ್ಕೂ ಹೆಚ್ಚು ಕೆರೆಗಳನ್ನು ಪುನರುಜ್ಜೀವನಗೊಳಿಸಿದೆ. ಮನುವಿಕಾಸ ಸಂಸ್ಥೆಯು ಸ್ಥಳೀಯ ಸಮುದಾಯವನ್ನು ಸಂಘಟಿಸಿ ಕೆರೆ ಅಭಿವೃದ್ಧಿಯ ಮಹತ್ವವನ್ನು ರೈತರಲ್ಲಿ ಅರಿವನ್ನು ಮೂಡಿಸಿ ಕೆರೆ ಅಭಿವೃದ್ಧಿಯೊಂದಿಗೆ ಜಲಸಂರಕ್ಷಣಾ ಕಾರ್ಯಕ್ಕೆ ಸಹಕಾರಿ ಆಗಿದೆ.

**ಗಣಪತಿ ಭಟ್ಟ**
**ನಿರ್ದೇಶಕರು, ಮನುವಿಕಾಸ**

# ರಷ್ಯಾ ದೇಶದಲ್ಲಿ ಗಣಪತಿ ಭಟ್ಟರಿಗೆ ಗ್ಲೋಬಲ್ ಅಚೀವರ್ಸ್ ಪ್ರಶಸ್ತಿ ಪ್ರದಾನ




ಕನ್ನಡ ಪತ್ರಿಕೋದ್ಯಮ ಇತಿಹಾಸದಲ್ಲಿಯೇ ಮೊದಲ ಬಾರಿಗೆ ವಿದೇಶದಲ್ಲಿ ನಾಡಿನ ಸಾಧಕರನ್ನು ಸನ್ಮಾನಿಸುವ ವಿಶ್ವವಾಣಿಯ ಗ್ಲೋಬಲ್ ಅಚೀವರ್ಸ್ ಅವಾರ್ಡ್ ಕಾರ್ಯಕ್ರಮದ ವೇಳೆ ನಾನಾ ಕ್ಷೇತ್ರಗಳ ಗಣ್ಯರನ್ನು ಸನ್ಮಾನಿಸುವುದರ ಜೊತೆ ಭಾರತ ಹಾಗೂ ಆಯಾ ದೇಶದ ಕಲೆ ಸಂಸ್ಕೃತಿಯನ್ನು ಮರಳಿಸುವಂತಹ ಪ್ರಯತ್ನದಲ್ಲಿ ಪತ್ರಿಕೆ ಯಶಸ್ಸು ಕಂಡಿದೆ. ಈ ಕಾರ್ಯಕ್ರಮದಲ್ಲಿ ನಮ್ಮ ನಾಡಿನ 21 ಸಾಧಕರಿಗೆ ರಷ್ಯಾದ ರಾಜಧಾನಿ ಮಾಸ್ಕೊದಲ್ಲಿ ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಆ ಸಾಧಕರ ಸಾಲಿನಲ್ಲಿ ಮನುವಿಕಾಸ ಸಂಸ್ಥೆಯ ನಿರ್ದೇಶಕರಾದ ಗಣಪತಿ ಭಟ್ಟರು ಕೂಡ ಒಬ್ಬರು.

ರಷ್ಯಾದ ರಾಜಧಾನಿ ಮಾಸ್ಕೊ ವಿಶ್ವದ ಸುಂದರ ನಗರಗಳಲ್ಲಿ ಒಂದು. ಇಂಥ ಸೌಂದರ್ಯದ ತವರು ಮನೆಯಲ್ಲಿ ಭಾರತ ಮತ್ತು ರಷ್ಯಾದ ಗಣ್ಯರ ಸಮ್ಮುಖದಲ್ಲಿ ಕರ್ನಾಟಕದ ವಿವಿಧ ಭಾಗಗಳಲ್ಲಿ ಅಂದರೆ ಸಮಾಜ ಸೇವೆ, ಕೃಷಿ, ಶಿಕ್ಷಣ, ಕ್ರೀಡೆ, ವೈದ್ಯಕೀಯ, ಚಿತ್ರರಂಗ, ಕೈಗಾರಿಕೋದ್ಯಮ, ಪ್ರವಾಸೋದ್ಯಮ ಇನ್ನೂ ಮುಂತಾದ ಹಲವು ರಂಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಾಧಕರನ್ನು ಗುರುತಿಸಿ ಅವರಿಗೆ ಅಂತರಾಷ್ಟ್ರೀಯ ವೇದಿಕೆಯಲ್ಲಿ ಗೌರವಿಸುವ ಕಾರ್ಯಕ್ರಮವನ್ನು ವಿಶ್ವವಾಣಿ ಪತ್ರಿಕೆಯು ಮಾಡಿತ್ತು.

ಕಳೆದ ಎರಡುವರೆ ದಶಕಗಳಿಗಿಂತಲೂ ಹೆಚ್ಚು ಸಮಯವನ್ನು ಸಮಾಜಸೇವೆಯಲ್ಲಿ ತೊಡಗಿಸಿಕೊಂಡು ಮನುವಿಕಾಸ ಎಂಬ ಸರ್ಕಾರೇತರ ಸ್ವಯಂ ಸೇವಾ ಸಂಸ್ಥೆಯನ್ನು ಹುಟ್ಟು ಹಾಕಿ ಉತ್ತರ ಕನ್ನಡ, ಹಾವೇರಿ, ಧಾರವಾಡ ಹಾಗೂ ಶಿವಮೊಗ್ಗ ಜಿಲ್ಲೆಗಳ ಆಯ್ದ ತಾಲೂಕುಗಳಲ್ಲಿ ರೈತರ ಸಹಭಾಗಿತ್ವದೊಂದಿಗೆ 300 ಕ್ಕೂ ಅಧಿಕ ಕೆರೆಗಳನ್ನು ಅಭಿವೃದ್ಧಿಪಡಿಸಿ ಜಲ ಸಂರಕ್ಷಣೆಯ ಜೊತೆಯಲ್ಲಿ ಲಕ್ಷಾಂತರ ರೈತರ ಬೇಸಾಯದ ಬದುಕಿಗೆ ಮನುವಿಕಾಸ ಸಂಸ್ಥೆಯ ನಿರ್ದೇಶಕ ಗಣಪತಿ ಭಟ್ಟರು ನೀರೆರೆದಿದ್ದಾರೆ. ಉತ್ತರ ಕನ್ನಡ ಜಿಲ್ಲೆಯ ಶಿರಸಿ, ಸಿದ್ದಾಪುರ, ಯಲ್ಲಾಪುರ, ಮುಂಡಗೋಡ, ಹಳಿಯಾಳ ಹಾಗೂ ಪಕ್ಕದ ಶಿವಮೊಗ್ಗ ಜಿಲ್ಲೆಯ ಸೊರಬ ತಾಲೂಕುಗಳಲ್ಲಿ ನಾಲ್ಕು ಸಾವಿರಕ್ಕೂ ಅಧಿಕ ಕೃಷಿ ಹೊಂಡಗಳನ್ನು ನಿರ್ಮಿಸಿ ಮಲೆನಾಡು ಭಾಗದ ಜನರ ನೀರಿನ ಬವಣೆಯನ್ನು ತೀರಿಸುವಲ್ಲಿ ನಿರ್ದೇಶಕರಾದ ಭಟ್ಟರ ಪಾತ್ರ ದೊಡ್ಡದು. ಉತ್ತರ ಕನ್ನಡ, ಹಾವೇರಿ, ಧಾರವಾಡ ಹಾಗೂ ಉಡುಪಿ ಜಿಲ್ಲೆಗಳ ಆಯ್ದ ತಾಲೂಕುಗಳಲ್ಲಿ ಮಹಿಳೆಯರನ್ನು ಒಗ್ಗೂಡಿಸಿ ಸ್ವ ಸಹಾಯ ಸಂಘಗಳನ್ನ ರಚಿಸಿ ಅವರಿಗೆ ಸ್ವ ಉದ್ಯೋಗದ ಪರಿಕಲ್ಪನೆಯ ಅರಿವನ್ನು ಮೂಡಿಸಿ ಹೋಲಿಗೆ ತರಬೇತಿ, ಅಡುಗೆ ತರಬೇತಿ ಹಾಗೂ ಹೈನುಗಾರಿಕಾ ತರಬೇತಿಗಳನ್ನು ನೀಡಿ ಮಹಿಳೆಯರು ಸ್ವಂತ ಉದ್ಯೋಗಗಳನ್ನು ಮಾಡಲು ಇವರು ನೆರವಾಗಿದ್ದಾರೆ.

ಈ ಕಾರ್ಯಕ್ರಮದಲ್ಲಿ ವಿಶ್ವವಾಣಿ ಪತ್ರಿಕೆಯ ಸಂಪಾದಕ ವಿಶ್ವೇಶ್ವರ ಭಟ್ ಹಾಗೂ ಹಿರಿಯ ಪತ್ರಕರ್ತರಾದ ರಾಜು ಅಡಕಳ್ಳಿಯವರನ್ನು ಕಾಣಬಹುದಾಗಿದೆ.



# ಮನುವಿಕಾಸ ಸಹಯೋಗದೊಂದಿಗೆ ಸಾಧಕರ ಸಾಲಿನ ಸ್ಫೂರ್ತಿವಂತರು ಪುಸ್ತಕ ಲೋಕಾರ್ಪಣೆ

ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ನಿರಂಜನ್ ವಾನಳ್ಳಿ ಪುಸ್ತಕವನ್ನು ಬಿಡುಗಡೆಗೊಳಿಸಿ ಮಾತನಾಡಿ, ಹಿಂದೆಲ್ಲಾ ವಿಷಯಕೊಟ್ಟು ಬರೆಸುವ, ಬರೆದ ಲೇಖನಗಳಿಗೆ ಇನ್ನಷ್ಟು ಹೊಸ ದೃಷ್ಟಿ ಕೊಡುವ ಹಿರಿಯ ಪತ್ರಕರ್ತರು ಮಾರ್ಗದರ್ಶಕರಿದ್ದರು. ಆದರೆ ಇಂದು ಇಂತಹ ಹಿರಿಯರನ್ನು ಹುಡುಕಬೇಕಿದೆ ಎಂದು ಹೇಳಿದರು. ಸ್ಥಳೀಯ ಭಾಷೆ ನೆಲ ಮೂಲದ ಬರಹಗಳನ್ನು ಹೆಚ್ಚು ಹೆಚ್ಚು ಬರೆಯಬೇಕು ಹುಡುಕಿಕೊಂಡು ಹೊರಟರೆ ಬೇಕಾದಷ್ಟು ಅಪರೂಪದ ಬರಹ ವಸ್ತುಗಳು ಸಿಗುತ್ತವೆ ಅಂದರು. ರಾಜು ಅಡಕಳ್ಳಿ ಅವರ ಕೃತಿ ಅಪರೂಪದ್ದಾಗಿದೆ, ಅವರು ಬಳಸುವ ಸ್ಥಳೀಯ ಸೊಗಡಿನ ಭಾಷೆ ಕೂಡ ಮಹತ್ವದ್ದಾಗಿದೆ ಎಂದರು. ವಾನಳ್ಳಿಯವರು ಇಂದಿನ ಸಾಧಕರ ಜೊತೆಗೆ ಹಿಂದಿನ ಸಾಧಕರ ಪರಿಚಯ ಆಗಬೇಕು ಮುಂದಿನ ತಲೆಮಾರಿಗೆ ಒಳ್ಳೆ ಕೊಡುಗೆಯಾಗಿ ಕೃತಿ ಖಂಡಿತವಾಗಿಯೂ ಉಳಿಯುತ್ತದೆ ಎಂದರು. ಮಾಧ್ಯಮ ಕ್ಷೇತ್ರದಲ್ಲಿ ಇಂದು ಕೈಹಿಡಿದು ಬರಸಬಲ್ಲ ಮಾರ್ಗದರ್ಶನ ನೀಡುವ ಹಿರಿಯರ ಕೊರತೆ ಇದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಹಿರಿಯ ಕನ್ನಡ ಚಿತ್ರನಟ ನೀರ್ನಳ್ಳಿ ರಾಮಕೃಷ್ಣ ಮಾತನಾಡಿ ರಾಜು ಅಡಕಳ್ಳಿ ಅವರ ಈ ಕೃತಿ ಕೂಡ ಓದುವ ಹಂಬಲ ಹೆಚ್ಚಿಸಿದೆ ಎಂದು ಹೇಳಿದರು.

ಸಮಾಜ ವಿಜ್ಞಾನಿ ಡಾ.ಪ್ರಕಾಶ್ ಭಟ್ ಮಾತನಾಡಿ ಕಲಾವಿದರೊಬ್ಬರು ಒಡವೆ ಇದ್ದು ಬಡವೆ ಎಂದು ಹೇಳಿದಂತೆ, ಉತ್ತರ ಕನ್ನಡದಲ್ಲಿ ಎಲ್ಲಾ ಇದ್ದು ಬಡವೆ ಎಂಬಂತಾಗಿರಬಾರದು, ನಾವು ಉತ್ತರ ಕನ್ನಡ ಬ್ರಾಂಡ್ ಮಾಡಿಕೊಳ್ಳಬೇಕಿದೆ ಎಂದರು.

ಕೃತಿಕಾರ ರಾಜು ಅಡಕಳ್ಳಿ ಮಾತನಾಡಿ ಕೃತಿ ಬಿಡುಗಡೆ ಎಂದರೆ ನಾಮಕರಣ ಮಾಡುವ ಕಾಲಘಟ್ಟ, ಮನೆಯಲ್ಲಿ ಕುಬೇರ ಮೂಲೆ ಇದ್ದಂತೆ ಸರಸ್ವತಿ ಮೂಲೆಯನ್ನು ನಿರ್ಮಾಣ ಮಾಡಬೇಕು ಚಿಕ್ಕದಾದ ಗ್ರಂಥಾಲಯವನ್ನು ಅಥವಾ ಪುಸ್ತಕಗಳನ್ನ ಸಂಗ್ರಹಿಸಿ ಇಟ್ಟುಕೊಳ್ಳುವಂತಹ ಪ್ರವೃತ್ತಿಯನ್ನು ಬೆಳೆಸಿಕೊಳ್ಳುವುದು ಒಳ್ಳೆಯದು. ಹಿರಿಯರಾದ ರಾಜೀವ್ ಹೆಗಡೆ ಅಜ್ಜಿಬಳ್ ಮಾತನಾಡಿ ಅಡಕಳ್ಳಿಯವರು ತಮ್ಮ ಪುಸ್ತಕದಲ್ಲಿ ಬಳಸಿರುವಂತಹ ಗ್ರಾಂಥಿಕ ಗ್ರಾಮೀಣ ಸೊಗಡಿನ ಶಬ್ದ ಮತ್ತು ಅದರ ಒಳಾರ್ಥವನ್ನು ಇಲ್ಲಿ ಸ್ಮರಿಸಿದ್ದು ವಿಶೇಷವಾಗಿತ್ತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಮನುವಿಕಾಸ ಸಂಸ್ಥೆಯ ನಿರ್ದೇಶಕರಾದ ಗಣಪತಿ ಭಟ್ಟರು ಮಾತನಾಡಿ ಎಲ್ಲರನ್ನೂ, ಎಲ್ಲಾ ಕ್ಷೇತ್ರವನ್ನು ಮುನ್ನಡೆಗೆ ತರುವ ಕಾರ್ಯವನ್ನು ರಾಜು ಅಡಕಳ್ಳಿ ಮಾಡಿದ್ದಾರೆ ಸಾಮಾಜಿಕ ಕ್ಷೇತ್ರಕ್ಕಿಂತ ಸಾಹಿತ್ಯ ಕ್ಷೇತ್ರ ಭಿನ್ನವಾದದ್ದು ನನಗೆ ಸಾಹಿತ್ಯ ಕ್ಷೇತ್ರ ಹೊಸತು ಎಂದು ಹೇಳಿದರು ಹಾಗೂ ರಾಜು ಅಡಕಳ್ಳಿ ಅವರ ನೂತನ ಪುಸ್ತಕಕ್ಕೆ ಶುಭ ಕೋರಿದರು.

ಕಾರ್ಯಕ್ರಮದಲ್ಲಿ ಶ್ರೀಮತಿ ವೀಣಾ ಅರುಣ್ ಕುಮಾರ್ ಜೋಶಿ ಪ್ರಾರ್ಥಿಸಿದರು, ಶ್ರೀಕಾಂತ್ ಹೆಗಡೆ ಅತಿಥಿಗಳನ್ನು ಸ್ವಾಗತಿಸಿದರು, ವೆಂಕಟೇಶ್ ಹೆಗಡೆ ಹೊಸಬಾಳೆಯವರು ವಂದಿಸಿದರು, ರಾಘವೇಂದ್ರ ಬೆಟಕೊಪ್ಪ ಕಾರ್ಯಕ್ರಮವನ್ನು ನಿರ್ವಹಿಸಿದರು. ಈ ಕಾರ್ಯಕ್ರಮದಲ್ಲಿ ಅನೇಕ ಗಣ್ಯರು, ಹಿರಿಯರು, ಸಾಧಕರು, ಸಾಹಿತ್ಯ ಆಸಕ್ತರು ಪಾಲ್ಗೊಂಡಿದ್ದರು.










# ನೀರಿನ ಸೆಲೆ ಸೆರೆ ಸಿಕ್ಕಾಗ...

ಎಲ್ಲೆಲ್ಲೂ ಹಸಿರು, ಅಲ್ಲಲ್ಲಿ ಕಾಣಸಿಗುವ ಹಸಿರು, ಗುಡ್ಡಬೆಟ್ಟ, ದಟ್ಟಕಾನನದ ಮಧ್ಯೆ ಕಪ್ಪು ಡಾಂಬಾರು ಮತ್ತು ಕಡಿಯ ರಸ್ತೆಯ ಕಾರುಬಾರು. ಗುಡ್ಡಡವಿಯಲಿ ಸುರಿದ ವರ್ಷಧಾರೆಯಿಂದ ರಸ್ತೆಯ ಅಂಚಲ್ಲಿ ಕಾಲುವೆ ತುಂಬೆಲ್ಲ ಹರಿಯುತ್ತಿರುವ ನೀರು.

ಹಸಿರ ಮೇಯಲು ಬಂದು ಮಳೆಯ ಅಬ್ಬರಕ್ಕೆ ತೊಯ್ದು ತೊಪ್ಪೆಯಾಗಿ ಅಲ್ಲಲ್ಲಿ ಗುಂಪಾಗಿ ನಿಂತಿರುವ ಜಾನುವಾರುಗಳು. ತೋಟಕ್ಕೆ ಮಾಡಿದ ಮುಚ್ಚಿಗೆಯನ್ನು (Mulching) ಯಾರ ಅಪ್ಪಣೆಯನ್ನು ಕೇಳದೆ ತನ್ನೊಟ್ಟಿಗೆ ಕೊಂಡೊಯ್ಯುತ್ತಿರುವ ಹಳ್ಳಕೊಳ್ಳಗಳು. "ಥೋ ಇವತ್ತು ಕರೆಂಟ್ ಇಲ್ಲಾ, ಲೈನ್ ಮೇಲೆ ಮರ ಬಿದ್ದದಂತೆ ಸರಿ ಮಾಡುಕೆ ಲೈನ್ ಮನ್ ಬಂದಾರೆ ಇವತ್ತು ಸಂಜಿಗಾರು ಕರೆಂಟ್‌ಕೊಟ್ರು ಕೊಡುರೇನ" ಎಂಬ ಆಶಾಭಾವನೆಯಲ್ಲಿ ಕೆಲ ಹಳ್ಳಿಗರು.

ನಾನು ಮಳೆಗಾಲದ ಒಂದು ದಿನ ಶಾಲ್ಮಲಾ ನದಿ ಕಣಿವೆಯ ಪ್ರದೇಶವಾದ ಉಮ್ಮಚಗಿ, ಮಂಚಿಕೇರಿ, ಭರತನಳ್ಳಿ, ಕುಂದರಗಿ, ಹೆಮ್ಮಾಡಿ ಭಾಗಗಳ ಒಂದಷ್ಟು ಹಳ್ಳಿಗಳಿಗೆ ನನ್ನ ಸಹೋದ್ಯೋಗಿ ಮಿತ್ರ ನಾಗರಾಜ ಹಸ್ಲರ್ ಜೊತೆಗೂಡಿ ಪ್ರಯಾಣ ಬೆಳೆಸಿದ್ದೆ, ನಮ್ಮಿಬ್ಬರಿಗೆ ಅಲ್ಲಲ್ಲಿ ಜೊತೆಯಾಗಿದ್ದು ಮಳೆರಾಯ.

ಈ ಬಾರಿ ಬೇಸಿಗೆಯಲ್ಲಿ ನಮ್ಮ ಮನುವಿಕಾಸ ಸಂಸ್ಥೆಯ ವತಿಯಿಂದ ಮಾಡಲಾದಂತಹ ಜಲ ಸಂರಕ್ಷಣೆಯ ಚಟುವಟಿಕೆಗಳಾದ ಕೃಷಿ ಹೊಂಡ, ಬೆಟ್ಟಕೆರೆ, ಟ್ರಂಚಸ್ ಗಳ ವೀಕ್ಷಣೆಗೆಂದು ನಾನು ಹೊರಟಿದ್ದೆ. ವಾಡಿಕೆಗಿಂತ ಬೇಗನೆ ಆರಂಭಗೊಂಡ ಮಳೆಗಾಲವನ್ನು ಸ್ವಾಗತಿಸಿ ಗದ್ದೆ ಕೆಲಸದಲ್ಲಿ ರೈತರು ತೊಡಗಿದ್ದರೆ ಇನ್ನೂ ಕೆಲ ರೈತರು ಅಡಿಕೆಯ ತೋಟಗಳಲ್ಲಿ ಕೊಳೆ ನಿಯಂತ್ರಣಕ್ಕೋಸ್ಕರವಾಗಿ ತುತ್ತಾ ಸುಣ್ಣದ ಸಿಂಪಡಣೆ ಕಾರ್ಯದಲ್ಲಿ ಮಗ್ನರಾಗಿದ್ದರು.

ಬೆಟ್ಟ ಗುಡ್ಡಗಳನ್ನು ತಿರುಗಾಡುತ್ತಾ ಕೃಷಿ ಹೊಂಡ, ಟ್ರಂಚ್ ಗಳನ್ನು ನೋಡುತ್ತಾ ಸಾಗಿದ್ದ ನಮಗೆ ಮಾರ್ಗ ಮಧ್ಯೆ ರೈತರೊರ್ವರು ಸಿಕ್ಕು ನಮ್ಮ ಸಂಸ್ಥೆಯ ವತಿಯಿಂದ ತಾವು ನಿರ್ಮಿಸಿಕೊಂಡ ಕೃಷಿ ಹೊಂಡದ ಪ್ರಸಂಗವನ್ನು ಹೇಳಲು ಶುರು ಮಾಡಿದರು. ಅವರಿಗಿದ್ದ ಒಂದುವರೆ ಎಕರೆ ತರಿ (ಹೊಲ) ಜಾಗದಲ್ಲಿ ಅಡಿಕೆ ತೋಟ ಮಾಡಬೇಕೆಂಬ ಆಸಕ್ತಿಯಿಂದ 450 ಅಡಿಕೆ ಸಸಿಗಳನ್ನು ನೆಟ್ಟು ಗೊಬ್ಬರ ಹಾಕಿ ಸಂಪೋಷಿಸುತ್ತಾ ಬಂದರು. ಗದ್ದೆಂಯು ಜೌಗು ನೆಲವಾದ್ದರಿಂದ ನೀರಿನ ತತ್ವಾರ ಆಗಲಿಲ್ಲ. ಮಾರ್ಚ ತಿಂಗಳ ಹೊತ್ತಿಗೆ ಜವಳು ನೀರು ಬಸಿದು ತೋಟ ಬಾಯಾರಿತ್ತು. ನೀರಾವರಿ ವ್ಯವಸ್ಥೆ ಕಲ್ಪಿಸಲು 80,000 ರೂಪಾಯಿ ಖರ್ಚು ಮಾಡಿ ಬೋರ್‌ವೆಲ್ ಕೊರೆಸಿದರು. ಒಂದು ಹನಿ ನೀರು ದಕ್ಕಲಿಲ್ಲ. ಒಣಗುತ್ತಿದ್ದ ಅಡಿಕೆ ಸಸಿಗಳಿಗೆ ನೀರುಣಿಸಲು ತೋಟದಲ್ಲಿ ಕೃಷಿ ಹೊಂಡ ನಿರ್ಮಿಸುವ ನಿರ್ಧಾರಕ್ಕೆ ಬಂದರು. ಯಾರೋ ಪರಿಚಿತರ ಮೂಲಕ ಮನುವಿಕಾಸ ಸಂಸ್ಥೆಯ ಪರಿಚಯವಾಗಿ ತೋಟದ ಅಂಚಲ್ಲಿ 15 ಅಡಿ ಆಳದ ಕೃಷಿ ಹೊಂಡ ನಿರ್ಮಿಸಿಕೊಂಡರು. ಈ ಬಾರಿ ಅವರಿಗೆ ಜಲದೇವತೆ ಕೈ ಬಿಡಲಿಲ್ಲ. ನೀರಿನ ಸೆಲೆ ಸಿಕ್ಕು ಹೊಂಡದ ತುಂಬ ನೀರು ತುಂಬಿಕೊಂಡಿತು. ಪಂಪ್ ಸೆಟ್ ಹಚ್ಚಿ ತೋಟಗಳಿಗೆ ನೀರು ಹಾಯಿಸಿದರು. ಕೃಷಿ ಹೊಂಡದ ನೀರು ಖಾಲಿಯಾಗಲಿಲ್ಲ, ಸಾಯುತ್ತಿದ್ದ ತೋಟವನ್ನು ಬದುಕಿಸಿದ್ದು ಇದೇ ಕೃಷಿ ಹೊಂಡ ಎನ್ನುತ್ತಾ ಭಾವುಕರಾದರು.

ನಮ್ಮ ಸಂಸ್ಥೆಯ ವತಿಯಿಂದ ನಿರ್ಮಾಣಗೊಂಡ ಕೃಷಿ ಹೊಂಡಗಳು ರೈತರಿಗೆ ಬೇಸಿಗೆಯಲ್ಲಿ ಅವರ ಕೃಷಿ ಚಟುವಟಿಕೆಗಳಿಗೆ ಕೈ ಹಿಡಿದಿದ್ದವು ಎಂಬ ಅಭಿಪ್ರಾಯ ನನಗೆ ರೈತರಿಂದ ದೊರೆಯಿತು. ಟ್ರಂಚ್ ಮತ್ತು ಬೆಟ್ಟಗಳಲ್ಲಿ ನೀರಿಂಗಿಸಲು ಮಾಡಿದ ಕಿರು ಕೆರೆಗಳು ಕೂಡ ನೀರಿನ ಸೆಲೆಯನ್ನು ಬಲಪಡಿಸಲು ನೆರವಾಯಿತು ಎಂಬ ವರದಿ ನನಗೆ ಸಿಕ್ಕಿತ್ತು. ಮನುವಿಕಾಸ ಸಂಸ್ಥೆ ಕಳೆದ ಒಂದುವರೆ ದಶಕಗಳಿಂದಲೂ ಹೆಚ್ಚು ಜಲ ಮತ್ತು ಪರಿಸರ ಸಂರಕ್ಷಣೆಯಲ್ಲಿ ಹೆಚ್ಚಾಗಿ ತೊಡಗಿಸಿಕೊಂಡಿದೆ. ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಕೊಳವೆ ಬಾವಿ ಕೊರೆಸಿದರೂ ನೀರು ಕಾಣದ ಅದೆಷ್ಟೋ ರೈತರನ್ನ ಕೈ ಹಿಡಿದು ರಕ್ಷಿಸಿದ್ದು ಕೃಷಿ ಹೊಂಡಗಳು. ಸಂಸ್ಥೆಯ ಕಾರ್ಯಗಳಿಂದ ಕೃಷಿಕರಿಗೆ ಆದಂತಹ ಅನುಕೂಲದ ಮಾತುಗಳನ್ನ ಕೇಳಿ ಇಂತಹ ಸಮಾಜಮುಖಿ ಕಾಯಕದಲ್ಲಿ ತೊಡಗಿಸಿಕೊಂಡಿದ್ದು ನನಗೆ ಖುಷಿ ಅನಿಸಿತು.

ಅಲ್ಲಿಯ ಹಸಿರು, ಅಡವಿ, ಗದ್ದೆ, ತೋಟಗಳು ಅಲ್ಲಿಯ ಪರಿಸರ ಅದೊಂದು ಅದ್ಭುತ ಸೃಷ್ಟಿ.

**ಶ್ರೀಕಾಂತ್ ಹೆಗಡೆ**
ಮನುವಿಕಾಸ ಸಂಸ್ಥೆ





# ಸಮುದಾಯಕ್ಕೆ ಕೆರೆ ಹಸ್ತಾಂತರ

ಮನುವಿಕಾಸ ಸಂಸ್ಥೆಯು ಆಶ್ರಯ ಹಸ್ತ ಟ್ರಸ್ಟ್ ಬೆಂಗಳೂರು ಇವರ ಸಹಕಾರದೊಂದಿಗೆ ಹಾನಗಲ್, ಹಾವೇರಿ, ಕಲಘಟಗಿ ತಾಲೂಕುಗಳಲ್ಲಿ ಗ್ರಾಮ ಪಂಚಾಯತದ ಅನುಮತಿ ಪಡೆದು ರೈತರ ಸಹಕಾರದೊಂದಿಗೆ 6 ಕೆರೆಗಳನ್ನು ಹೂಳೆತ್ತಿ ಅಭಿವೃದ್ಧಿಪಡಿಸಿದೆ. ಅವುಗಳಲ್ಲಿ ಹಾನಗಲ್ ತಾಲೂಕಿನ ಹಳ್ಳಿಬೈಲ್ ಗ್ರಾಮದ ದೊಡ್ಡಕೆರೆ ಹಾಗೂ ಕಲಘಟಗಿ ತಾಲೂಕಿನ ಹುಣಸಿಕಟ್ಟಿ ಗ್ರಾಮದ ಗೊಲ್ಲಗೌಡರ ಕೆರೆಯನ್ನು ಹೂಳೆತ್ತಿ ಅಭಿವೃದ್ಧಿಪಡಿಸಿದ್ದು, ಊರಿನ ರೈತರು, ಗ್ರಾಮ ಪಂಚಾಯತಿಯ ಅಭಿವೃದ್ಧಿ ಅಧಿಕಾರಿಗಳು, ಗ್ರಾ.ಪಂ. ಸದಸ್ಯರ ಸಮ್ಮುಖದಲ್ಲಿ ಕೆರೆಯನ್ನು ಸಮುದಾಯಕ್ಕೆ ಹಸ್ತಾಂತರಿಸಲಾಯಿತು.













# ಸಸಿ ನೆಟ್ಟು ವಿಶ್ವ ಪರಿಸರ ದಿನಾಚರಣೆ







ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಎಚ್.ಡಿ.ಬಿ ಫೈನಾನ್ಶಿಯಲ್ ಸರ್ವಿಸಸ್ ಸಂಸ್ಥೆಯ ಹುಬ್ಬಳ್ಳಿ ಶಾಖಾ ಕಚೇರಿಯ ಸಿಬ್ಬಂದಿಗಳು, ಮನುವಿಕಾಸ ಸಂಸ್ಥೆಯ ಸಿಬ್ಬಂದಿಗಳು ಸೇರಿ ಸ್ಥಳೀಯ ರೈತರು ಮತ್ತು ವಿದ್ಯಾರ್ಥಿಗಳೊಂದಿಗೆ ಮುಂಡಗೋಡ ತಾಲೂಕಿನ ಬಾಚಣಕಿ ಗ್ರಾಮದ ಬಳ್ಳಿಗಟ್ಟಿ ಕೆರೆಯ ಸುತ್ತಲೂ ವಿವಿಧ ಗಿಡಗಳನ್ನು ನೆಟ್ಟು ವಿಶ್ವ ಪರಿಸರ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಸಿ.ಎಮ್.ಎಸ್. ಫೌಂಡೇಶನ್ ಸಹಕಾರದೊಂದಿಗೆ ಮನುವಿಕಾಸ ಸಂಸ್ಥೆಯು ಶಿರಸಿ ತಾಲೂಕಿನ ಬನವಾಸಿ ಹೋಬಳಿಯ ವ್ಯಾಪ್ತಿಯಲ್ಲಿನ ಆಯ್ದ ಹಳ್ಳಿಗಳಲ್ಲಿ ಮತ್ತು ಶಾಲೆಗಳಲ್ಲಿ ವಿಶ್ವ ಪರಿಸರ ದಿನಾಚರಣೆಯ ಕುರಿತಾದ ಕಾರ್ಯಕ್ರಮವನ್ನು ಆಯೋಜಿಸಿ ಸಸಿಗಳನ್ನು ವಿತರಿಸಿತು. ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಶಾಲಾ ವಿದ್ಯಾರ್ಥಿಗಳಿಗೆ ಪರಿಸರ ಸಂರಕ್ಷಣೆಯ ಮಹತ್ವವನ್ನು ತಿಳಿಸಲಾಯಿತು. ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಶಾಲಾ ಮಕ್ಕಳು ಸಸಿಗಳನ್ನು ನೆಟ್ಟು ಸಂತಸಗೊಂಡರು.



ಮನುವಿಕಾಸ ಸಂಸ್ಥೆಯು ಉತ್ತರ ಕನ್ನಡ, ಹಾವೇರಿ, ಶಿವಮೊಗ್ಗ ಮತ್ತು ಧಾರವಾಡ ಜಿಲ್ಲೆಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದು, ಪ್ರತಿ ತಾಲೂಕಿಗೂ ಸಂಸ್ಥೆಯ ಕೆಲಸಗಳ ಉಸ್ತುವಾರಿಯನ್ನು ನೋಡಿಕೊಳ್ಳಲು ಈ ಕೆಳಗಿನಂತೆ ಸಿಬ್ಬಂದಿಗಳನ್ನು ನೇಮಿಸಿದೆ.

| | | |
|---|---|---|
| ಶಿರಸಿ | ಮಂಜುನಾಥ ಹೆಗಡೆ (ಕೆರೆ ಅಭಿವೃದ್ಧಿ ಮತ್ತು ಸ್ವ ಸಹಾಯ ಸಂಘಗಳ ನಿರ್ವಹಣೆ) | 94494 53774 |
| | ಗಣಪತಿ ಗಾಮದ್ (ಕೆರೆ ಅಭಿವೃದ್ಧಿ ಮತ್ತು ಸ್ವ ಸಹಾಯ ಸಂಘಗಳ ನಿರ್ವಹಣೆ) | 91132 59935 |
| | ಭವಾನಿ ನಾಯ್ಕ್ (ಸ್ವ ಸಹಾಯ ಸಂಘಗಳ ನಿರ್ವಹಣೆ) | 82960 53961 |
| | ಬಾಲಚಂದ್ರ ಗೌಡ (ಕೆರೆ ಅಭಿವೃದ್ಧಿ ಮತ್ತು ಸ್ವ ಸಹಾಯ ಸಂಘಗಳ ನಿರ್ವಹಣೆ) | 94804 16732 |
| ಸಿದ್ದಾಪುರ | ಪುನೀತ್ ನಾಯ್ಕ್ (ಕೆರೆ ಅಭಿವೃದ್ಧಿ ಮತ್ತು ಸ್ವ ಸಹಾಯ ಸಂಘಗಳ ನಿರ್ವಹಣೆ) | 96862 24908 |
| | ನಾಗರಾಜ್ ಹಸ್ಲರ್ (ಕೆರೆ ಅಭಿವೃದ್ಧಿ ಮತ್ತು ಸ್ವ ಸಹಾಯ ಸಂಘಗಳ ನಿರ್ವಹಣೆ) | 70227 63799 |
| ಸೊರಬ | ಪುನೀತ್ ನಾಯ್ಕ್ (ಸ್ವ ಸಹಾಯ ಸಂಘಗಳ ನಿರ್ವಹಣೆ) | 96862 24908 |
| ಹಳಿಯಾಳ & ದಾಂಡೇಲಿ | ನಿರಂಜನ್ ಕದಂ (ಸ್ವ ಸಹಾಯ ಸಂಘಗಳ ನಿರ್ವಹಣೆ) | 72596 89630 |
| ಮುಂಡಗೋಡ | ಗಣಪತಿ ಯಲಿವಾಳ (ಕೆರೆ ಅಭಿವೃದ್ಧಿ ಮತ್ತು ಸ್ವ ಸಹಾಯ ಸಂಘಗಳ ನಿರ್ವಹಣೆ) | 99802 05013 |
| ಹಾನಗಲ್ & ಬ್ಯಾಡಗಿ | ಅಶ್ವತ್ಥ ನಾಯ್ಕ್, (ಕೆರೆ ಅಭಿವೃದ್ಧಿ ಮತ್ತು ಸ್ವ ಸಹಾಯ ಸಂಘಗಳ ನಿರ್ವಹಣೆ) | 73380 06242 |
| | ಸಂಜೀವ ಬಾರ್ಕಿ (ಕೆರೆ ಅಭಿವೃದ್ಧಿ ಮತ್ತು ಸ್ವ ಸಹಾಯ ಸಂಘಗಳ ನಿರ್ವಹಣೆ) | 88610 37457 |
| ಹಿರೇಕೆರೂರ | ಬಸವರಾಜ ಎಸ್.ಜಿ. (ಕೆರೆ ಅಭಿವೃದ್ಧಿ ಮತ್ತು ಸ್ವ ಸಹಾಯ ಸಂಘಗಳ ನಿರ್ವಹಣೆ) | 84310 52674 |
| ಕಲಘಟಗಿ | ಬಸವರಾಜ್ ರಡ್ಡೇರ್ (ಕೆರೆ ಅಭಿವೃದ್ಧಿ ಮತ್ತು ಸ್ವ ಸಹಾಯ ಸಂಘಗಳ ನಿರ್ವಹಣೆ) | 98458 84293 |
| ಕಾರವಾರ | ಸುಜಾತಾ ದುರ್ಗೇಕರ್ (ಸ್ವ ಸಹಾಯ ಸಂಘಗಳ ನಿರ್ವಹಣೆ) | 72045 77307 |
| ಕುಮಟಾ & ಹೊನ್ನಾವರ | ನವೀನ ನಾಯ್ಕ (ಸ್ವ ಸಹಾಯ ಸಂಘಗಳ ನಿರ್ವಹಣೆ) | 78991 54285 |

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿರಿ.

MANUVIKASA

# ಮನುವಿಕಾಸ


'ಶ್ರೀ ಮಾತಾ' ಬಿಲ್ಡಿಂಗ್, ವಿಜಯನಗರ, ತಾ।। ಶಿರಸಿ
ಉತ್ತರ ಕನ್ನಡ ಜಿಲ್ಲೆ, ಕರ್ನಾಟಕ–581401

Phone: +91 98459 82552 Email: manuvikasa@gmail.com
Website : www.manuvikasa.org